ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ | ರಾಯಚೂರು | ಬಳ್ಳಾರಿ | ವಿಜಯನಗರ | ಯಾದಗಿರಿ | ಬೆಂಗಳೂರು | ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ.

ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 144 | Saturday 19-10-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

## ಸಂಕ್ಷಿಪ್ತ ವಾರ್ತೆ

### 2ಎ ಮೀಸಲಾತಿ : ಸಿಎಂ ಜೊತೆ ಸಮಾಲೋಚನೆ ನಡೆಸಿದ ಪಂಚಮಸಾಲಿ ಸಮುದಾಯದ ನಿಯೋಗ



**ಬೆಂಗಳೂರು :** ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವ ಸಂಬಂಧಪಟ್ಟಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಗೃಹ ಕಚೇರಿ ಕೃಷ್ಣಾದಲ್ಲಿ, ಸಮುದಾಯದ ಸಚಿವರು, ಪ್ರಮುಖರು ಹಾಗೂ ಜನಪ್ರತಿನಿಧಿಗಳೊಂದಿಗೆ ಮಹತ್ವದ ಸಮಾಲೋಚನೆ ನಡೆಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಶಿವರಾಜ್ ತಂಗಡಗಿ, ಲಕ್ಷ್ಮಿ ಹೆಬ್ಬಾಳ್ಕರ್, ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ವಿನಯ್ ಕುಲಕರ್ಣಿ, ವಿಜಯಾನಂದ ಕಾಶ್ಯಪ್ಪನವರ್, ಕೂಡಲ ಸಂಗಮ ಗುರುಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಬಸವ-ಜಯ ಮೃತ್ಯುಂಜಯ ಸ್ವಾಮೀಜಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಮೊದಲ ಬಾರಿಗೆ ಸಭೆಯನ್ನು ನಡೆಸಲಾಗುತ್ತಿದೆ. ಈ ಮೊದಲು ಔಪಚಾರಿಕವಾಗಿ ಸಮಾಲೋಚನೆಗಳಾಗಿದ್ದವು. ಇಂದು ಅಧಿಕೃತ ಚರ್ಚೆಯಲ್ಲಿ ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ ಎಂದು ಹೇಳಿದರು.

ಸರ್ಕಾರ ಸಭೆಯ ಬಳಿಕ ಗಾಂಧಿ ಭವನದಲ್ಲಿ ಸಮುದಾಯದ ಪ್ರಮುಖರು ಹಾಗೂ ಜನಪ್ರತಿನಿಧಿಗಳು
ಪ್ರತ್ಯೇಕ ಸಮಾಲೋಚನೆ ನಡೆಸಲಿದ್ದಾರೆ. ಅಲ್ಲಿ ಮುಂದಿನ ಹೋರಾಟ ಅಥವಾ ಕ್ರಮಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

### ಶ್ರೀ ಮಹರ್ಷಿ ವಾಲ್ಮೀಕಿ ಆದರ್ಶದಿಂದ ಮನುಷ್ಯ ಪರಿವರ್ತನೆ ಆಗುತ್ತಾನೆ : ದೊಡ್ಡವ ಕೇಶವ ರೆಡ್ಡಿ



● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅ18.** ಮಹಾಕವಿ ಶ್ರೀ ಮಹರ್ಷಿ ವಾಲ್ಮೀಕಿ ಅವರು, ರಾಮಾಯಣ ಮಹಾ ಗ್ರಂಥವನ್ನು ರಚಿಸಿ ಆಗಿನ ಕಾಲದಲ್ಲಿಯೇ ಕುಟುಂಬ ಎಂದರೇನು? ಸಂಬಂಧಗಳು ಹೇಗಿರಬೇಕು ಎನ್ನುವುದು ತಮ್ಮ ಗ್ರಂಥಗಳಲ್ಲಿ ಬರೆದವರು ಅವರ ಆದರ್ಶಗಳನ್ನು ಅನುಸರಿಸದಲ್ಲಿ ಕುಟುಂಬಗಳಲ್ಲಿ ಹೊಂದಾಣಿಕೆಗಳು ಸಾಧ್ಯ, ಒಬ್ಬ ವ್ಯಕ್ತಿ ಪರಿವರ್ತನೆಯಾಗಿ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ಶ್ರೀ ಮಹರ್ಷಿ ವಾಲ್ಮೀಕಿಯೇ ಕಾರಣ ಎಂದು ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷರು ಹಾಗೂ ಆಮ್ ಆದ್ಮಿ ಪಕ್ಷದ ಮುಖಂಡರಾದ ದೊಡ್ಡ ಕೇಶವ ರೆಡ್ಡಿ ತಿಳಿಸಿದರು

ಅವರು ವಾಲ್ಮೀಕಿ ಜಯಂತಿ ಪ್ರಯುಕ್ತ ನಗರದ ಎಸ್ ಪಿ ಸರ್ಕಲ್ ನಲ್ಲಿರುವ ವಾಲ್ಮೀಕಿ ಪುತ್ಥಳಿ ಮಾಲಾರ್ಪಣೆ ಮಾಡಿ ಮಾತನಾಡಿದರು.

ಈ ಸಂದರ್ಭದಲ್ಲಿ ಜೆ. ವಿ. ಮಂಜುನಾಥ, ಡಿ ಅರುಣ್ ಕುಮಾರ್, ದಾಸಪುರ, ಚಕ್ರವರ್ತಿ, ನಾಗರಾಜ್ ಗೌಡ, ಪ್ರಸಾದ್ ರೆಡ್ಡಿ, ಭರತ್ ಯಾದವ್, ಸುರೇಶ್ ನಾಯಕ್, ವಿಜಯಕುಮಾರ್, ಸುರೇಶ್, ಈಶ್ವರ್ ರೆಡ್ಡಿ ಮುಂತಾದವರು ಇದ್ದರು.

### ವಾಲ್ಮೀಕಿ ಮಹರ್ಷಿಗಳ ಗ್ರಂಥಗಳನ್ನು ಪ್ರತಿ ನಿತ್ಯ ಓದುವ ಹವ್ಯಾಸ ಮಾಡಿ :ಮೇಗಳಗೇರಿ ಕೊಟ್ರೇಶ್



● ವಾರ್ತಾಲೋಕ ವಾರ್ತೆ

**ಕೊಟ್ಟೂರು :ಅ18.** ಕೊಟ್ಟೂರು ಪಟ್ಟಣದ ಸಾರ್ವಜನಿಕ ಗ್ರಂಥಾಲಯದಲ್ಲಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಹೂವಿನ ಹಾರ ಹಾಕಿ ಪುಷ್ಪಾರ್ಚನೆ ಮಾಡಿ ನಮಸ್ಕರಿಸುವ ಮೂಲಕ ಶ್ರೀ ಮಹರ್ಷಿ ವಾಲ್ಮೀಕಿ ಅವರ ಜಯಂತಿಯನ್ನು ಆಚರಿಸಲಾಯಿತು.

ಮಹರ್ಷಿ ವಾಲ್ಮೀಕಿ ಅವರ ಗ್ರಂಥಗಳನ್ನು ಪ್ರತಿನಿತ್ಯ ಓದುವ ಹವ್ಯಾಸವನ್ನು ವಿದ್ಯಾರ್ಥಿಗಳು ಮತ್ತು ನಾವೆಲ್ಲರು ರೂಡಿಸಿಕೊಳ್ಳಬೇಕು ಎಂದು *ಶ್ರೀ ಮೇಗಳಗೇರಿ ಕೊಟ್ರೇಶ್* *ಉಪನ್ಯಾಸಕರು* ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಈ ಸಂದರ್ಭದಲ್ಲಿ , ಮರಿಯಪ್ಪ , ಅಜ್ಜಪ್ಪ ,ಈಶಪ್ಪ, ಮಲ್ಲಪ್ಪ ಗುಡ್ಲಾನೂರ್, ಕಾಳೇಶ ,ಶ್ರೀನಿವಾಸ್ ಇವರು ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮಸ್ಕರಿಸಿದರು.

ವರದಿ ಪರಶುರಾಮ್.

## ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲರ್ಸ್ ಇದೀಗ ಹೊಸಪೇಟೆಯಲ್ಲಿ







**ಹೊಸಪೇಟೆ :** ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲರ್ಸ್ ಹೊಸಪೇಟೆಯ ಗ್ರಾಹಕರಿಗಾಗಿ ಹೋಟೆಲ್ ಮಲ್ಲಿಗೆಯಲ್ಲಿಏರ್ಪಡಿಸಿರುವ ವಿಶೇಷ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಶಾಸಕ ಹೆಚ್.ಆರ್.ಗವಿಯಪ್ಪ ಉದ್ಘಾಟಿಸಿದರು. ಅ.18 ರಿಂದ 21 ರವರೆಗೆ ಹೊಸಪೇಟೆ, ಹಂಪಿಯ ಹೊಟೆಲ್ ಮಲ್ಲಿಗೆಯಲ್ಲಿ ವಿಶೇಷ ಆಭರಣ ಪ್ರದರ್ಶನ ನಡೆಯಲಿದೆ. ಶುದ್ಧ ಚಿನ್ನ ಮತ್ತು ರತ್ನಗಳು ಹಾಗೂ ಅತ್ಯುತ್ತಮವಾದ ಕರಕುಶಲತೆಯೊಂದಿಗೆ ಸಾಂಪ್ರದಾಯಿಕ ಮತ್ತು ಸಮಕಾಲೀನ ಸೃಷ್ಟಿಗಳ ಸಂಗ್ರಹವನ್ನು ವಿಶಿಷ್ಟ ಶ್ರೇಣಿಯೊಂದಿಗೆ ಪ್ರದರ್ಶಿಸಲಿದೆ.

ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರ್ಸ್‌ನ ಆಭರಣ ಸಂಗ್ರಹಗಳು ವೈಡೂರ್ಯ, ಸಿಟ್ರಿನ್, ಮುತ್ತುಗಳು, ನೀಲ, ಮಾಣಿಕ್ಯಗಳಂತಹ ಅಪರೂಪದ ವಜ್ರಗಳ ಸೂಕ್ಷ್ಮ ವಿನ್ಯಾಸಗಳೊಂದಿಗೆ ಸೊಬಗು ಮತ್ತು ಕ್ಲಾಸಿಕ್ ಶೈಲಿಯ ಸಮ್ಮಿಲನವಾಗಿವೆ. ನಿಮ್ಮ ವ್ಯಕ್ತಿತ್ವದತ್ತ ಗಮನ ಸೆಳೆಯಲು ಮತ್ತು ಅಬ್ಬರದ ಚಿಕ್ ಆಭರಣಗಳೊಂದಿಗೆ ನಿಮ್ಮ ವಸ್ತ್ರವಿನ್ಯಾಸಕ್ಕೆ ಸರಿಹೊಂದುವಂತೆ ವಿನ್ಯಾಸಗೊಳಿಸಲಾಗಿದೆ.

ಸಿಕೆಸಿ ಯ crash.club, ಬೆಳ್ಳಿ ಆಭರಣ ಬ್ರ್ಯಾಂಡ್ ಆಗಿದ್ದು, 6 ನೇ ತಲೆಮಾರಿನ ಚೈತನ್ಯ ವಿ ಕೋಥಾ ನೇತೃತ್ವದಲ್ಲಿ ಮತ್ತು ಕಲ್ಪನೆಯೊಂದಿಗೆ ಫ್ಯಾಶನ್ ಅನ್ನು ಉದ್ದೇಶದೊಂದಿಗೆ ಸಂಯೋಜಿಸುವ, ಕೈಗೆಟುಕುವ ಮತ್ತು ಸೊಗಸಾದ ಬೆಳ್ಳಿ ಆಭರಣಗಳನ್ನು 599/ ರೂ.ನಿಂದ ಪ್ರಾರಂಭವಾಗುವ ಬೆಲೆಗಳೊಂದಿಗೆ ಒದಗಿಸುವ ತನ್ನ ಅದ್ಭುತ ಉಪಕ್ರಮವನ್ನು ಘೋಷಿಸಲು ರೋಮಾಂಚನಗೊಂಡಿದೆ. ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವದ ಸಂಕೇತವಾದ ಖಡ್ಗಮೃಗವು ಸಿಕೆಸಿ ಮತ್ತು ಅದರ ಸಮುದಾಯದಿಂದ crash. club ಗೆ ಪ್ರಬಲ ಸ್ಫೂರ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಸಿಕೆಸಿ ಮೂಲಕ ಒಂದು ಉದ್ದೇಶದೊಂದಿಗೆ ಫ್ಯಾಷನ್ ಕ್ರಾಂತಿಯಲ್ಲಿ ಛಿಡಿಛ್ಷಿ. ಛಿಟಣಾಛ ಗೆ ಸೇರಿ ಮತ್ತು ಉತ್ತಮ ಕಾರ್ಯವೊಂದರಲ್ಲಿ ಭಾಗಿಯಾಗಿ. ಕೈಗೆಟುಕುವ ಬೆಲೆಯ ಬೆಳ್ಳಿ ಆಭರಣಗಳ ಆಕರ್ಷಣೆಯನ್ನು ಅನುಭವಿಸಿ, ಬೆಲೆಗಳು ರೂ. 599/- ರಿಂದ ಪ್ರಾರಂಭ. ಸಿಕೆಸಿ ಯ ಹಾಲ್‌ಮಾರ್ಕ್ ಹೊಂದಿರುವ 925 ಶುದ್ಧ ಬೆಳ್ಳಿಯ ಆಭರಣಗಳನ್ನು crash.club ನಲ್ಲಿ 52 ಅಂಕಗಳ ಗುಣಮಟ್ಟದ ಪರಿಶೀಲನೆಯೊಂದಿಗೆ ಮತ್ತು 155 ವರ್ಷಗಳ ಸಾಬೀತಾದ ಪರಂಪರೆಯೊಂದಿಗೆ ನೀಡುತ್ತಿದೆ. ಈ ಬಗ್ಗೆ ಹೆಚ್ಚು ತಿಳಿಯಲು www.crash. club ಗೆ ಭೇಟಿ ನೀಡಿ.

ಛಿಡಿಛ್ಷಿ.ಛಿಟಣಾಛ ನ ನಮ್ಮ ಲ್ಯಾಬ್ ಗ್ರೋನ್ ಡೈಮಂಡ್ಸ್ ಹೃದಯಭಾಗದಲ್ಲಿ ಒಂದು ಸೊಗಸಾದ ಸ್ವರೂಪ ಹೊಂದಿದ್ದು, ಕಾಸ್ಮಿಕ್ ಮತ್ತು ಸೊಗಸಾದ ಕರಕುಶಲತೆಯ ಸಮ್ಮಿಳನವಿದೆ. ಪ್ರತಿ ವಜ್ರವು ನಕ್ಷತ್ರದ ಧೂಳಿನ ಸಾರವನ್ನು ಪ್ರತಿಧ್ವನಿಸುತ್ತದೆ, ಬ್ರಹ್ಮಾಂಡದ ಆಳವಾದ ಸಂಪರ್ಕವನ್ನು ಪ್ರತಿಬಿಂಬಿಸುತ್ತದೆ. ಶಾಂಪಿಂಗ್ ಮಾಡಲು https://crash.club/pages/lab-grown-diamonds-listing & ತಾಣಕ್ಕೆ ಭೇಟಿ ನೀಡಿ. ಪೂರ್ಣ ಸಂಗ್ರಹಕ್ಕಾಗಿ: https://www.ckcjewellers.com/ckc/search/traditional

ಸಿ. ಕೃಷ್ಣಯ್ಯ ಚೆಟ್ಟಿ ಜ್ಯೂವೆಲರ್ಸ್ ವಿಶೇಷವಾದ ವಿಶೇಷ ಕೊಡುಗೆಯೊಂದಿಗೆ ಬಂದಿದೆ- ಚಿನ್ನಾಭರಣ ಮತ್ತು ಬೆಳ್ಳಿಯ ವಸ್ತುಗಳ ಮೇಲೆ 3% ರಿಯಾಯಿತಿಗಳು; ವಜ್ರಗಳು ಮತ್ತು ವಜ್ರದ ಆಭರಣಗಳ ಮೇಲೆ 6%; 1 ಅಖ ಮತ್ತು ಅದಕ್ಕಿಂತ ಹೆಚ್ಚಿನ ವಜ್ರದ ಸಾಲಿಟೇರ್‌ಗಳ ಮೇಲೆ 1%; ಡೈಮಂಡ್ ಮತ್ತು ಡೈಮಂಡ್ ಕುಂದನ್ ಸೆಟ್ ಜ್ಯುವೆಲ್ಲರಿ ಬಿಲ್‌ಗಳ ಮೇಲೆ 18.69% ರೂ. 18.69 ಲಕ್ಷಕ್ಕಿಂತ ಹೆಚ್ಚು (ಒಟ್ಟಿಗೆ ಒಂದೇ ಹೆಸರಿನಲ್ಲಿ ಒಂದು ಅಥವಾ ಹೆಚ್ಚಿನ ಬಿಲ್‌ಗಳಲ್ಲಿ ಒಂದೇ ದಿನದಲ್ಲಿ ಒಂದೇ ವಹಿವಾಟಿನ ಮೇಲೆ)18.69% ಕುಂಡಲವೇಲ್ಯೈ ಆಭರಣಗಳ ಬಿಲ್‌ಗಳ ಮೇಲೆ 18.69 ಲಕ್ಷಕ್ಕೂ ಹೆಚ್ಚು (ಒಟ್ಟಿಗೆ ಒಂದೇ ಹೆಸರಿನಲ್ಲಿ ಒಂದು ಅಥವಾ ಹೆಚ್ಚಿನ ಬಿಲ್‌ಗಳಲ್ಲಿ, ಒಂದೇ ದಿನದಂದು ಒಂದೇ ವಹಿವಾಟಿನ ಮೇಲೆ ಒಟ್ಟಿಗೆ ಬಿಲ್ ಮಾಡಲಾಗುತ್ತದೆ) ಬಿಡಿಭಾಗಗಳು ಮತ್ತು ಸಡಿಲವಾದ ರತ್ನದ ಕಲ್ಲುಗಳ ಮೇಲೆ 6%; ಛಿಡಿಛ್ಷಿ.ಛಿಟಣಾಛ? ಮತ್ತು ಖಚಿಡಿಜ ಖಛಿಜಟಿಣ? ಮೇಲಿನ ಎಲ್ಲಾ ವಹಿವಾಟಿನ ಮೇಲೆ 18.69%; ಪ್ರತಿ 3 ಅಣ ಗಿಂತ ಹೆಚ್ಚಿನ ವಜ್ರಗಳ ಮೇಲೆ 3%. ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಕೊಡುಗೆ 18.10.2024 ರಂದು ಪ್ರಾರಂಭವಾಗುತ್ತದೆ ಮತ್ತು 21.10.2024 ರಂದು ಕೊನೆಗೊಳ್ಳುತ್ತದೆ. ಹೆಚ್ಚಿನ ಮಾಹಿತಿಗೆ: ಒಡಿ. ಕಡಿಛಿಚಿಜ: +91 97400 18415 & ಒಡಿ. ಖಡಿಜಜಝುಚಿಡು : +91 99809 50819.

## ಸರ್ಕಾರಿನೌಕರಸಂಘದ ಕುರುಗೋಡುತಾಲೂಕುಸಮಿತಿ ನಿರ್ದೇಶಕ ಚುನಾವಣೆಗೆ ನಾಮಪತ್ರಸಲ್ಲಿಕೆ ಇಂದು ಮುಕ್ತಾಯ

● ವಾರ್ತಾಲೋಕ ವಾರ್ತೆ



**ಕುರುಗೋಡು.ಅ.18** ಪಟ್ಟಣದ ಸರ್ಕಾರಿ ನೌಕರಸಂಘದ ಕಛೇರಿಯಲ್ಲಿ 2024-29ನೇ ಅವಧಿಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರಸಂಘದ ಕುರುಗೋಡು ತಾಲೂಕು ಘಟಕ ನಿರ್ದೇಶಕರ ಚುನಾವಣೆ ನಿಮಿತ್ತ ಉಮೇದುವಾರರು ತೀವ್ರಕುತೂ ಹಲದಿಂದ ನಾಮುಂದು- ತಾಮುಂದು ಎಂದು ಬಿರುಸಿನಿಂದ ನಾಮಪತ್ರಸಲ್ಲಿಸಿದರು. ಇದಕ್ಕೂ ಮುನ್ನ ನಾಮಪತ್ರಸಲ್ಲಿಕೆ ಅ.9 ರಿಂದ ಆರಂಭವಾದ ನಾಮಪತ್ರಸಲ್ಲಿಕೆ, ಇಂದು ಅ.18 ರಂದು ಸಂಜೆ ನಾಮಪತ್ರಸಲ್ಲಿಕೆ ಮುಕ್ತಾಯಗೊಂಡಿತು.

ಕುರುಗೋಡು ತಾಲೂಕು ಘಟಕಕ್ಕೆ ಒಟ್ಟು 26 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಈ ಚುನಾವಣೆಗೆ ಉಮೇದುವಾರರು ಎಲ್ಲಾ ಇಲಾಖೆಗಳಿಂದ ಒಟ್ಟು 34 ಮಂದಿ ಉಮೇದುವಾರರು ನಾಮಪತ್ರಸಲ್ಲಿಸಿದ್ದಾರೆ ಎಂದು ಸರ್ಕಾರಿನೌಕರಸಂಘದ ಚುನಾವಣಾಧಿಕಾರಿ ಎಸ್ಎನ್. ತಿಪ್ಪೇಸ್ವಾಮಿ, ಹಾಗು ಸಹಾಯಕ ಚುನಾವಣಾಧಿಕಾರಿ ಟಿ.ಹುಲುಗಪ್ಪ ನವರು ತಿಳಿಸಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರಸಂಘದ ಕುರುಗೋಡು ತಾಲೂಕು ಘಟಕಕ್ಕೆ ಒಟ್ಟು 26 ಸ್ಥಾನಕ್ಕೆ ಒಟ್ಟು 34 ಮಂದಿ ಉಮೇದುವಾರರು ನಾಮಪತ್ರಸಲ್ಲಿಸಿದ್ದಾರೆ. ಅ.19ಕ್ಕೆ ನಾಮಪತ್ರಪರಿಶೀಲನೆ, ಅ.21ಕ್ಕೆ ನಾಮಪತ್ರವನ್ನು ಹಿಂದಪಡೆಯುವದಿನವಾಗಿದ್ದು, ಚುನಾವಣೆ ಅ.28ಕ್ಕೆ ನಿಗದಿಗೊಳಿಸಲಾಗಿದೆ ಎಂದು ಸಂಘದ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.


## ಇಪ್ಟ್ ಕಲಾವಿದರ ವಿಜಯನಗರ ಜಿಲ್ಲಾ ಮಂಡಳಿ ಸಭೆ



● ವಾರ್ತಾಲೋಕ ವಾರ್ತೆ

**ಹರಪನಹಳ್ಳಿ : ಅ18.** ಹರಪನಹಳ್ಳಿ..ಭಾರತಿಯ ಜನ ಕಲಾ ಸಮಿತಿ .ವಿಜಯನಗರ ಜಿಲ್ಲಾ ಮಂಡಳಿ ಸಭೆ ಹರಪನಹಳ್ಳಿ ಪ್ರವಾಸಿ ಮಂದಿರದಲ್ಲಿ ನಡೆಸಲಾಯಿತು ಸಭೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಟಿ.ಷಣ್ಮುಖಸ್ವಾಮಿ. ಮಾತನಾಡಿ ಇಪ್ಟ್ ಸಂಘಟನೆ ಇದೋಂದು ಸ್ವಾತಂತ್ರ್ಯ ಪೂರ್ವ ಕಲಾ ಸಂಘಟನೆ ಯಾಗಿದ್ದು 1943ರಲ್ಲಿ ಉದ್ಘಾಟನೆಗೋಂಡು ಕಲೆ ಸಾಹಿತ್ಯ ಸಂಸ್ಕೃತಿ ಸಂಗಿತ ಮೂಲಕ ಜನರಿಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ.ಇಪ್ಟ್ ಕಲಾ ಸಂಘಟನೆ ಮೂಲಕ ಬಾಂಬೆಯಲ್ಲಿ.ಬಲರಾಮ್ ಸಹಾನಿ.ಬಿಷ್ಮಾಸಹನಿ.ಖೈಪ್ಆಜ್ಮೀ.ಶಬೂನಾಜ್ಮಿ .ಕರ್ನಾಟಕದ ಶಂಕರ್ ನಾಗ್.ಅನಂತನಾಗ. ಎಂ.ಎಸ.ಸತ್ಯೂ.ನೆನಪಿರಲಿ ಪ್ರೇಮಾ.ಇಡಿ ಸಿನಿಮಾ ರಂಗದಲ್ಲಿ ಅನೇಕ ಕಲಾವಿದರನ್ನು ಇಪ್ಟ್ ಕಲಾ ಸಂಘಟನೆಯ ಕೊಡುಗೆ ಯಾಗಿದೆಯೆಂದರು. ಅಖಿಲ ಭಾರತ ಯುವಜನ ಫೆಡರೇಷನ್ ರಾಜ್ಯ ಕಾರ್ಯದರ್ಶಿ.ಹೆಚ್.ಎಂ.ಸಂತೋಷ ರವರು ಮಾತನಾಡಿ.ಈಗಿನ ಕಲಾವಿದರಿಗೆ ಸೌಲಭ್ಯ ಸಿಗದೇ ಸೌಲಭ್ಯ ವಂಚಿತರಾಗಿದ್ದಾರೆ.ಗ್ರಾಮಿಣಾ ಮಟ್ಟದ ಕಲಾವಿದರಿಗೆ ಸರ್ಕಾರಗಳು ಗುರುತಿಸಿ ಸೌಲಭ್ಯ ಕೊಡುವಲ್ಲಿ ಮುಂದಾಗಬೇಕು ಎಂದರು.ಸಭೆಯಲ್ಲಿ ಇಪ್ಟ್ ರಾಜ್ಯ ಉಪಾಧ್ಯಕ್ಷ ಟಿ.ಚಮನ್ ಸಾಬ್. ಗುಡಿಹಳ್ಳಿ ಹಾಲೇಶ್.ಹಲಗಿ ಸುರೇಶ.ಬಸವರಾಜ ಸಂಶಿ.ಖಾನಹಳ್ಳಿ ಮುಸ್ತಫಾ.ಸೈಪುಲ್ಲಾ.ಮಹದೇವಪ್ಪ. ವಸಂತಮ್ಮ.ಅನೇಕ ಕಲಾವಿದರು ಭಾಗವಹಿಸಿದ್ದರು. ವರದಿ ಸುರೇಶ್ ಹಲಗಿ.

## ಜಗತ್ತು ಕಂಡ ಅದ್ಭುತ ಕವಿ ವಾಲ್ಮೀಕಿ ಮಹರ್ಷಿ: ಜಿ.ರಾಜು



● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ18** ಜಗತ್ತು ಕಂಡ ಅದ್ಭುತ ಕವಿ ವಾಲ್ಮೀಕಿ ಮಹರ್ಷಿ ರಚಿಸಿದ ಮಹಾ ಕಾವ್ಯ ರಾಮಾಯಣ ಎಂದು ವೈಎಸ್. ಎಸ್ ಸಮೂಹ ಸಂಸ್ಥೆಯ ಆಡಳಿತಾಧಿಕಾರಿ ಜಿ.ರಾಜು ಹೇಳಿದರು.

ಅವರು ಪಟ್ಟಣದ ವೈಎಸ್.ಎಸ್.ಸಮೂಹ ಸಂಸ್ಥೆ ಮತ್ತು ಜ್ಞಾನಭಾರತಿ ವಿದ್ಯಾಮಂದಿರದಲ್ಲಿ ವಾಲ್ಮೀಕಿ ಜಯಂತಿಯಲ್ಲಿ ಭಾವಚಿತ್ರಚಕ್ಕೆ ಪುಷ್ಪವನ್ನು ಸಲ್ಲಿಸಿ, ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡುತ್ತಿದ್ದರು.

ಅಯೋಧ್ಯಯಲ್ಲಿ ರಾಮನ
ನಿಷ್ಠೆ ಅರಿಯಬೇಕಾಗಿದೆ.ಮನುಷ್ಯ ಸಂಸ್ಕಾರವಂತನಾಗಬೇಕು ಮತ್ತು ಸಾತ್ವಿಕತೆ ಇರಬೇಕು ಅವುಗಳು ಇಲ್ಲವಾದರೆ ಬದುಕಲಿಕ್ಕೆ ಅರ್ಹನಲ್ಲ ಎಂದರು ಈ ಗ್ರಂಥ ಲೋಕ ಕಲ್ಯಾಣಕ್ಕೆ ನಾಂದಿಯಾಯಿತು.ಸಂಸ್ಕಾರದಿಂದ ರಾಮ ಹೆಸರು ಅಜಾರಮರ ಎಂದು ತಿಳಿಸಿದರು.

ರಾಮಾಯಣದ ವೀರರ ಸಮಕಾಲೀನರಾದ ಮಹರ್ಷಿ ವಾಲ್ಮೀಕಿ ಅವರು ತಮ್ಮ ಬಗ್ಗೆ ಬಹಳ ಕಡಿಮೆ ಮಾಹಿತಿಯನ್ನು ನೀಡುತ್ತಾರೆ ಏಕೆಂದರೆ ಅವರು ತಮ್ಮ ಜೀವನವನ್ನು ದೇವರ ಚಿಂತನೆ ಮತ್ತು ಮಾನವೀಯತೆಯ ಸೇವೆಗೆ ಸಂಪೂರ್ಣವಾಗಿ ಮುಡಿಪಾಗಿಟ್ಟ ಋಷಿಯಾಗಿದ್ದರು ಎಂದು ನುಡಿದರು.

ಉಪನ್ಯಾಸಕ ಬಸವರಾಜ್.ಎನ್ ಮಾತನಾಡಿ ತಮಸಾ ನದಿಯ ತೀರದಲ್ಲಿ ಅರ್ಘ್ಯವನ್ನು ನೀಡುತ್ತಿದ್ದಾಗ, ಸಂತೋಷವಾಗಿ ಹಾರಾಡುತ್ತಿದ್ದ ಕ್ರೌಂಚ ಪಕ್ಷಿಯ ಜೋಡಿಯನ್ನು ವಾಲ್ಮೀಕಿ ಮುನಿಗಳು ಕಾಣುತ್ತಾರೆ.

ಅದೇ ಸಮಯಕ್ಕೆ ಬೇಡನೊಬ್ಬ ಬಂದು ಗಂಡು ಹಕ್ಕಿಗೆ ಬಾಣ ಹೊಡೆದು ಕೊಲ್ಲುತ್ತಾನೆ. ಇದರಿಂದ ಸಂಕಟ ತಡೆಯಲಾರದ ಹೆಣ್ಣು ಹಕ್ಕಿಯು ಹೃದಯ ವಿದ್ರಾವಕವಾಗಿ ಶೋಕಿಸುತ್ತದೆ. ಆ ಹಕ್ಕಿಯ ಸಂಕಟವನ್ನು ಕಂಡ ವಾಲ್ಮೀಕಿಯ ಬಾಯಲ್ಲಿ ಶೋಕವೇ ಛಂದೋಬದ್ಧವಾದ ಶ್ಲೋಕವಾಗಿ ಹರಿದುಬರುತ್ತದೆ. ಆ ಬೇಡನನ್ನು ವಾಲ್ಮೀಕಿ ಮುನಿ ಶಪಿಸಲು ಮುಂದಾದಾಗ, ಬ್ರಹ್ಮದೇವನೇ ಋಷಿಯ ಆಶ್ರಮಕ್ಕೆ ಬಂದು, ಶ್ಲೋಕವನ್ನು ಉದ್ಗರಿಸಿದಂತೆಯೇ, ಇಡೀ ರಾಮಾಯಣದ ಕಥೆಯನ್ನು ರಚಿಸುವಂತೆ ಪ್ರೇರೇಪಿಸುತ್ತಾನೆ. ಎಂದು ತಿಳಿಸಿದರು.

ಈ ಸಮಯದಲ್ಲಿ ಬಿಇಡಿ ಕಾಲೇಜಿನ ಪ್ರಾಚಾರ್ಯರಾದ ಎಚ್. ಎಂ.ವಿಜಯಕುಮಾರ್ ಮಾತನಾಡಿದರು. ಬಿಫಾರ್ಮಸಿ
ಪ್ರಾಂಶುಪಾರಾದ ಜಯಚಂದ್ರ,ಮಲ್ಲೈಕ್ ಇಂಗ್ಲೀಷ ಮಾಧ್ಯಮ ಮುಖ್ಯೋಪಾದಾಂಯರು,ಮಂಜುನಾಥ ಜ್ಞಾನಭಾರತಿ ಶಾಲೆಯ ಮುಖ್ಯೋಪಾದಾಯ , ಶಿಕ್ಷಕಾರದ ಗುಪ್ಪಲ್ ಕೋಟ್ರೇಶ, ಅರ್ಚನ, ಪ್ರದೀಪ ಹಾಗೂ ಎಲ್ಲಾ ವಿಭಾಗಗಳ ಶಿಕ್ಷಕರು ಮತ್ತು ಪ್ರಾಶಿಕ್ಷಣಾರ್ಥಿಗಳು ಇದ್ದರು. ನಿರೂಪಣೆ ಕಾವ್ಯಬಣಕರ್, ಸ್ವಾಗತ ನಿಂಗಪ್ಪ, ವಂದನಾರ್ಪಣೆ ಮಹೇಶ್, ಪ್ರಾರ್ಥನೆ ಕಾವ್ಯಕ್ಕೆ ಸೌಂದರ್ಯ ನೆರವೇರಿಸಿದ್ದರು.

ವರದಿ ಹೆಚ್ಚು ವೀರಣ್ಣ

## ಮುಡಾ ದಾಳಿ ಹಿಂದೆ ಸರ್ಕಾರ ಅಥವಾ ಬಿಜೆಪಿಯ ಕೈವಾಡವಿಲ್ಲ : ಅಶೋಕ್



**ಬೆಂಗಳೂರು ;** ಮುಡಾ ಕಚೇರಿ ಹಾಗೂ ಜಮೀನು ಮಾಲೀಕ ದೇವರಾಜ್ ನಿವಾಸದ ಮೇಲೆ ಇಡಿ ಅಧಿಕಾರಿಗಳು ನಡೆಸಿರುವ ದಾಳಿಯಲ್ಲಿ ಕೇಂದ್ರ ಸರ್ಕಾರ ಅಥವಾ ಬಿಜೆಪಿಯ ಕೈವಾಡ ಇಲ್ಲ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಕಾಂಗ್ರೆಸ್ನ ಆರೋಪವನ್ನು ತಳ್ಳಿಹಾಕಿದ್ದಾರೆ.

ಸ್ಂದ್ದಿಗಾರ್ರ್ಂದಿಗ್ ಮಾತನಾಡಿದ ಅವರು, ಪ್ರತಿ ಬಾರಿ ದಾಳಿ ನಡೆದಾಗ ಕಾಂಗ್ರೆಸ್ನವರು ಕೇಂದ್ರದ ಮೇಲೆ ದೂರುವುದು ಸರ್ವೇ ಸಾಮಾನ್ಯವಾಗಿದೆ. ಮೈಸೂ-ರಿನ ಮುಡಾ ಕಚೇರಿ ಮತ್ತು ಪ್ರಕರಣದ 4ನೇ ಆರೋಪಿ ದೇವರಾಜ್ ನಿವಾಸದ ಮೇಲೆ ಇಡಿ ದಾಳಿ ನಡೆಸಿರುವುದಕ್ಕೂ ನಮ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು.


ಅಷ್ಟಕ್ಕೂ ಇಡಿಗೆ ದೂರು ಕೊಟ್ಟಿದ್ದು ಬಿಜೆಪಿಯಲ್ಲ. ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಎಂಬುವರು 500 ಪುಟಗಳ ದಾಖಲೆಯನ್ನು ಸಲ್ಲಿಸಿದ್ದರು.

ಅಲ್ಲದೆ ಸ್ವತಃ ಇಡಿ ಅಧಿಕಾ-ರಿಗಳು ಅವರಿಂದ ಹೇಳಿಕೆಯನ್ನು ಪಡೆದಿದ್ದರು. ಇದರಲ್ಲಿ ಬಿಜೆಪಿ ಪಾತ್ರ ಎಲ್ಲಿಂದ ಬರುತ್ತದೆ ಎಂದು ಪ್ರಶ್ನಿಸಿದರು.

ಇಡಿ ದಾಳಿ ಮಾಡಿರೋದು ಸ್ನೇಹಮಯಿ ಕೃಷ್ಣ ಕೊಟ್ಟಿರುವ ದೂರಿನ ಆಧಾರದಲ್ಲಿ ಸಿದ್ದರಾಮಯ್ಯ ಸೈಟುಗಳಷ್ಟೇ ಅಲ್ಲ 3-4 ಸಾವಿರ ಕೋಟಿ ಅಕ್ರಮವಾಗಿದೆ ಎಂದು ಮ-ರಿಗೌಡ ಅವರೇ ತನಿಖೆಗೆ ಕೋರಿ ಸರ್ಕಾರಕ್ಕೆ ಪತ್ರ ಬರೆದಿದ್ದರು. ಇದಾದ ನಂತರ ಸ್ನೇಹಮಯಿ ದೂರು ಕೊಟ್ಟಿದ್ದಾರೆ. ಖುದ್ದು ಕಾಂಗ್ರೆಸ್ನವರೇ ಅಕ್ರಮ ಬಗ್ಗೆ ಹೇಳಿದ್ದಾರೆ. ಹೀಗಾಗಿ ಈ ಇಡಿ ದಾಳಿ ರಾಜಕೀಯ ಪ್ರೇರಿತ ಅಲ್ಲ ಎಂದು ಪುನರುಚ್ಚರಿಸಿದರು.

# ಮುನಿರಾಬಾದ್ ಯೋಜನ ಗ್ರಾಮದಲ್ಲಿ ಸರಣಿ ಕಳ್ಳತನ ಅಧಿಕಾರಿಗಳು ಮೌನ!

● ವಾರ್ತಾಲೋಕ ವಾರ್ತೆ







**ಮುನಿರಾಬಾದ್ : ಅ18.** ಕೊಪ್ಪಳ ತಾಲೂಕಿನ ಮುನಿರಾಬಾದ್ ಡ್ಯಾಮ್ ಯೋಜನೆ ಗ್ರಾಮದಲ್ಲಿ ಸರಣಿ ಕಳ್ಳತನ ಕಳ್ಳರ ಕೈ ಚಳಕ. ಮೊದಲಿಗೆ ರಮೇಶ್ ವಯಸ್ಸು 30 ರ ಆಸು ಪಾಸು, ಸಾಕಿನ : ಮುನಿರಾಬಾದ್ ಡ್ಯಾಂ. ಇವರು ತಮ್ಮ ಜೀವನೋಪಾಯಕ್ಕೆ ಚಿಲ್ಲರೆ ಅಂಗಡಿಯನ್ನು ನಡೆಸುತ್ತಿರುತ್ತಾರೆ, ಈ ಅಂಗಡಿಯೂ ಮುನಿರಾಬಾದ್ ಪೊಲೀಸ್ ಠಾಣೆಯ ಕೂಗಳತೆ ದೂರದಲ್ಲಿರುವ ಚಿಲ್ಲರೆ ಅಂಗಡಿಯಾಗಿರುತ್ತೆ,
ಈ ಚಿಲ್ಲರೆ ಅಂಗಡಿಯಲ್ಲಿ ಸುಮಾರು 3000 ನಗದು ಸಿಗರೇಟ್ ಮತ್ತು ಗುಟಕ ಗಳನ್ನು ಕಳ್ಳತನ ಮಾಡಿರುತ್ತಾರೆ.
ರವಿಕುಮಾರ್ ನಾಯಕ್ ರವರ ಮನೆಯಲ್ಲಿ ಮಧ್ಯಾಹ್ನ 2:00 ಗಂಟೆಯಿಂದ 3:00 ಗಂಟೆಯ ಆಸು ಪಾಸು ಕಳ್ಳರು ಮುಖ್ಯ ಬಾಗಿಲಿನ ಬೀಗವನ್ನು ಹೊಡೆದು ಮನೆಯಲ್ಲಿರುವಂತಹ ಲ್ಯಾಪ್ಟಾಪ್ ನಗದು ಹಣ ಇನ್ನು ಸೇರಿದಂತೆ ಕಳ್ಳತನ ಮಾಡಿ ಪರಾರಿಯಾಗಿರುತ್ತಾರೆ
ದಿನಾಂಕ 9.10:24ರ ರಾತ್ರಿ ಜಯಮ್ಮ ಗಂಡ ದಿವಂಗತ ಆಂಜನೇಯಲು ವಯಸ್ಸು 57 ಸಾಕಿನ ಹೊಸಪೇಟೆ ಕೆಲಸದ ನಿಮಿತ್ತ ಮುನಿರಾಬಾದ್ ಗ್ರಾಮದಲ್ಲಿ ಸುಮಾರು 10 ವರ್ಷದಿಂದ ವಾಸವಿದ್ದು ಪಕ್ಕದ ಮನೆಯಲ್ಲಿ ಅವರ ತಾಯಿ ಲಕ್ಷ್ಮಮ್ಮ ಗಂಡ ದಿವಂಗತ ಹಂಪಿ ಆಂಜನೇಯಪ್ಪ ವಯಸ್ಸು 80 ಎಂಬ ಹಿರಿಯ ನಾಗರಿಕರು ವಯಸ್ಕರ ಪಿಂಚಣಿ ಹಣ ತಮ್ಮ ಕಣ್ಣಿನ ಶಸ್ತ್ರ ಚಿಕಿತ್ಸೆಗಾಗಿ 25000 ವನ್ನು ಸೇರಿಟ್ಟಿ ರುತ್ತಾರೆ. ಆದರೇ ದಿನಾಂಕ 9.10.24 ರ ರಾತ್ರಿ ಪಕ್ಕದ ಮನೆಯಲ್ಲಿದ್ದ ಮಗಳ ಮನೆಯಲ್ಲಿ ಊಟಮಾಡಿ ಮೊಮ್ಮಕ್ಕಳ ಜೊತೆ ಅದೇ ಮನೆಯಲ್ಲಿ ಮಲಗಿರುತ್ತಾರೆ, ದುರಾದೃಷ್ಟ ಅದೇ ರಾತ್ರಿ 01:00 ಗಂಟೆ ಸುಮಾರಿಗೆ ಮನೆಯಲ್ಲಿ ಹುಟ್ಟಿದ 25000 ನಗದು ಎರಡು ಸೀರೆ ಒಂದು ಲುಂಗಿ ಒಂದು ಟವಲ್ ಕಳ್ಳತನವಾಗಿದೆ ಎಂದು ದಿನಾಂಕ 10 10 24ರಂದು ಬೆಳಗ್ಗೆ ತಿಳಿದಿರುತ್ತದೆ. ತಕ್ಷಣ ಹತ್ರ ಇರುವ ಪೊಲೀಸ್ ಠಾಣೆಗೆ ಮಾಹಿತಿಯನ್ನು ನೀಡಿದ ಪೊಲೀಸ್ ಠಾಣೆಯ ಅಧಿಕಾರಿಗಳು ಬಂದು ಪರಿಶೀಲಿಸಿ ಮಾಹಿತಿಯನ್ನು ತೆಗೆದುಕೊಂಡಿರುತ್ತಾರೆ ಎಂದು ಲಕ್ಷ್ಮಮ್ಮ ಗಂಡ ದಿ. ಹಂಪಿ ಆಂಜಿನಪ್ಪ ರವರು ತಿಳಿಸಿರುತ್ತಾರೆ
ಪದ್ಮಾವತಿ ಗಂಡ ದಿವಂಗತ ಚೆನ್ನಯ್ಯ ವಯಸ್ಸು 56 ಸಾಕಿನ ಮುನಿರಾಬಾದ್ ಡ್ಯಾಮ್ ಸರ್ಕಾರಿ ಪ್ರೌಢಶಾಲೆಯ ಹಿಂದಿರುವ ವಸತಿ ಗ್ರಹದಲ್ಲಿ ವಾಸಿಸುತ್ತಿದ್ದರು. ದಿನಲ್ವಾ 16.10.2024ರಂದು ಬೆಳಿಗ್ಗೆ ತಮ್ಮ ಸಂಬಂಧಿಕರ ಮನೆಗೆ ಮಾತನಾಡಲು ಹೋಗಿರುತ್ತಾರೆ. ರಾತ್ರಿಯ ವೇಳೆ ಅವರ ಮನೆಯಿಂದ ಹಿಂತಿರುಗಿ ತಮ್ಮ ಮನೆಗೆ ಬರುವ ವೇಳೆ ಅತಿ ಹೆಚ್ಚು ಮಳೆ ಆಗಿರುವುದರಿಂದ ರಾತ್ರಿ ಅಲ್ಲಿಯೇ ವಸತಿ ಇದ್ದು 17-10-2024ರ ಬೆಳಗ್ಗೆ ಸುಮಾರು 6:30 ಕ್ಕೆ ತಮ್ಮ ಮನೆಯ ಹಿಂತಿರುಗಿ ಬಂದಾಗ ಮನೆಗೆ ಹಾಕಿರುವ ಬೀಗ ಇರುವುದಿಲ್ಲ ತಕ್ಷಣ ಅಕ್ಕ ಪಕ್ಕದ ಮನೆಯವರನ್ನು ಕರೆದು ವಿಷಯವನ್ನು ತಿಳಿಸಿರುತ್ತಾರೆ ಆಗ ಅಲ್ಲೇ ಇದ್ದ ಪಕ್ಕದ ಮನೆಯವರು ಇಂದಿನ ಬಾಗಿಲಿನಿಂದ ಬಂದು ಒಳಗಿನಿಂದ ಕೊಂಡಿ ಹಾಕಿರುವಂತಹ ಮುಖ್ಯ ಬಾಗಿಲನ್ನು ತೆಗೆದಿರುತ್ತಾರೆ. ಮನೆ ಯಜಮಾನ ಮನೆಯಲ್ಲಿ ಕಳ್ಳತನ ಆಗಿರುವುದು ತಿಳಿದು ಬಂದಿರುತ್ತದೆ. ಮನೇಲಿದ್ದ 5 ಗ್ರಾಂ ಬಂಗಾರದ ಕಿವಿಯ ಜುಮ್ಕಿ, 200 ಗ್ರಾಂ ಬೆಳ್ಳಿಯ ಕಾಲು ಪಟ್ಟಿ ಹಾಗೂ 20,000 ನಗದು ಹಣ ಕಳ್ಳತನವಾಗಿದೆ ಎಂದು ಮನೆಯ ಮಾಲತಿ ಪದ್ಮಾವತಿ ಗಂಡ ದಿವಂಗತ ಚೆನ್ನಯ್ಯ ರವರು ತಿಳಿಸಿರುತ್ತಾರೆ. ಇದರಲ್ಲಿ ವಿಶೇಷ ವಿಷಯ ಏನೆಂದರೆ ಅಲಮಾರಿ ಬೀರೋ ದಲ್ಲಿ ಇಟ್ಟಿರುವಂತಹ ಭಗವದ್ಗೀತೆಯ ಪುಸ್ತಕವನ್ನು ಕಳ್ಳರು ದೇವರ ಕೋಣೆಯಲ್ಲಿ ಇಟ್ಟಿರುತ್ತಾರೆ ಮತ್ತು ಪೊಲೀಸರಿಗೆ ಮಾಹಿತಿಯನ್ನು ನೀಡಲಾಗಿದೆ ಠಾಣೆಯಿಂದ ಪೊಲೀಸ್ ಅಧಿಕಾರಿಗಳು ಬಂದು ಕೆಲವು ಫೋಟೋಗಳನ್ನು ತೆಗೆದು ಮಾಹಿತಿಯನ್ನು ಸಂಗ್ರಹಿಸಿಕೊಂಡು ಹೋಗಿರುತ್ತಾರೆ ಎಂದು ತಿಳಿದು ಬಂದಿರುತ್ತದೆ.
ಇದನ್ನೆಲ್ಲ ನೋಡಿದ ಗ್ರಾಮಸ್ಥರು ಈ ಸರಣಿ ಕಳ್ಳತನದಿಂದ ಬಹಳ ಭಯದಿಂದ ಬದುಕಬೇಕಾಗಿದೆ ಈ ರೀತಿ ಸತತ ಕಳ್ಳತನವಾದರೂ ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಮೌನದಿಂದ ಇದ್ದಾರೆ ಮತ್ತು ಪೊಲೀಸ್ ಠಾಣೆ ಇರುವ ಊರಿನಲ್ಲಿಯೇ ಈ ರೀತಿ ಪರಿಸ್ಥಿತಿ ಎಂದರೆ ಬೇರೆ ಗ್ರಾಮಗಳ ಗತಿ ಏನು? ಪೊಲೀಸ್ ಅಧಿಕಾರಿಗಳ ಮುಂದಿನ ಕ್ರಮ ಏನು ಎಂಬುದನ್ನು ಕಾದು ನೋಡಬೇಕಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.
ವರದಿ ಅಬ್ದುಲ್ ವಾಹಿದ್.

# ಅನ್ಮೋಲ್ ಪ್ರಶಸ್ತಿ: ಪ್ರಧಾನ, ಉತ್ಸವ ಆಚರಣೆ: ಕಿಡ್ನಿ, ಹೃದ್ರೋಗ, ಕ್ಯಾನ್ಸರ್, ಕಾಯಿಲೆಗಳ ತಪಾಸಣೆ ಅ.21ಕ್ಕೆ ಮುನಿರಾಬಾದ್‌ನಲ್ಲಿ ಬೃಹತ್ ಉಚಿತ ಆರೋಗ್ಯ ಶಿಬಿರ: ಅನ್ಮೋಲ್ ಆಹ್ಮದ್‌ಖಾದ್ರಿ

● ವಾರ್ತಾಲೋಕ ವಾರ್ತೆ






**ಕೊಪ್ಪಳ:** ಅನ್ಮೋಲ್ ಜೀಯಾ ಟ್ರಸ್ ಹೊಸಪೇಟೆ, ರೋಟರಿ ಕ್ಲಬ್ ಆಫ್ ರೈಸ್ ಬೌಲ್ ಗಂಗಾವತಿ ಹಾಗು ಸಪ್ತಗಿರಿ ಆಸ್ಪತ್ರೆ ಬೆಂಗಳೂರು ಸಹಯೋಗದಲ್ಲಿ ಅನ್ಮೋಲ್ ಉತ್ಸವದ ಅಂಗವಾಗಿ ಅ.21 ಸೋಮವಾರ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಹುಲಿಗಿ ಸಮೀಪದ ಮುನಿರಾಬಾದ್ ದೊಡ್ಡ ಮಸೀದಿ ಹತ್ತಿರದ ಅನ್ಮೋಲ್ ಜೀಯ ಮಂಜಿಲ್‌ನಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇದರ ಪ್ರಯೋಜನ ಪಡೆಯಬೇಕೆಂದು ಅನ್ಮೋಲ್ ಉತ್ಸವ 2024ರ ಪ್ರಧಾನ ಸಂಚಾಲಕರಾದ ಅನ್ಮೋಲ್ ಆಹ್ಮದ್ ಖಾದ್ರಿ ತಿಳಿಸಿದ್ದಾರೆ.
ಈ ಕುರಿತು ಪ್ರಕಟಣೆ ನೀಡಿರುವ ಅವರು, ಗಂಭೀರ ಕಾಯಿಲೆಗಳಾದ ಕ್ಯಾನ್ಸರ್, ಹೃದ್ರೋಗ, ಮೂಳೆ ಮತ್ತು ಕೀಲುನೋವು, ಸ್ತ್ರೀ ಮತ್ತು ಪ್ರಸೂತಿ, ಮಕ್ಕಳ ತಪಾಸಣೆ, ಬೆನ್ನು ನೋವು, ಕುತ್ತಿಗೆ ನೋವು, ಮೆದುಳಿನಲ್ಲಿ ಗಡ್ಡೆ, ಹರ್ನಿಯ, ಪಿತ್ತಕೋಶದಲ್ಲಿ ಕಲ್ಲು, ಅಪೆಂಡಿಸೈಟಸ್, ಸ್ತನ ಕ್ಯಾನ್ಸರ್, ಕಿವಿಮೂಗು ಮತ್ತು ಗಂಟಲು, ಥೈರಾಯಿಡ್, ಪೈಲ್ಸ್ ಮೂಲವ್ಯಾದಿ ಸೇರಿದಂತೆ ಗಂಭೀರ ರೋಗಗಳ ಉಚಿತ ತಪಾಸಣೆ ಮಾಡಿಸಲಾಗುತ್ತಿದ್ದು, ಬಿಪಿಎಲ್, ಅಂತ್ಯೋದಯ, ಯಶಸ್ವಿನಿ ಕಾರ್ಡುದಾರರಿಗೆ ಉಚಿತ ಚಿಕಿತ್ಸೆ ಮಾಡಲಾಗುತ್ತದೆ. ನಿತ್ಯ ಜಂಜಡಗಳಿಂದ ಆರೋಗ್ಯದ ಬಗೆಗೆ ಬಹುತೇಕರು ನಿಷ್ಕಾಳಜಿ ವಹಿಸುತ್ತಿದ್ದು ಬಹುತೇಕ ಎಲ್ಲಾ ರೋಗಗಳಿಗೂ ಒಂದೇ ವೇದಿಕೆಯಲ್ಲಿ ತಪಾಸಣೆ ನೆಡಸಾಗುತ್ತಿದೆ ಸಾರ್ವಜನಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಪಾಸಣೆ ಮಾಡಿಕೊಳ್ಳುವಂತೆ ಅವರು ಕೋರಿದ್ದಾರೆ.
ಆರೋಗ್ಯ ಶಿಬಿರದ ಉದ್ಘಾಟನೆಯ ಜತೆಗೆ ಅನ್ಮೋಲ್ ಉತ್ಸವ 2024 ಕಾರ್ಯಕ್ರಮ ಜರುಗಲಿದ್ದು, ತುಂಗಭದ್ರ ಜಲಾಶಯದ ಕ್ರಸ್ಟ್ ಗೇಟ್ ಅಳವಡಿಕೆಗೆ ಜೀವ ಪಣಕಿಟ್ಟು ಶ್ರಮಿಸಿದ ಮೆಕಾನಿಕ್ ಎಸ್.ಫಕ್ರುದ್ದೀನ್ ಅವರಿಗೆ ಅನ್ಮೋಲ್ ರತ್ನ-2024 ಪ್ರಶಸ್ತಿ ನೀಡಲಾಗುವುದು, ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್ ಉತ್ಸವಕ್ಕೆ ಚಾಲನೆ ನೀಡುವರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ.ಎ.ವಲಿಸಾಬ್ (ಹಕೀಂಸಾಬ್) ವಹಿಸುವರು, ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿ.ಪಂ.ಮಾಜಿ ಅಧ್ಯಕ್ಷ ಟಿ.ಜನಾರ್ದನ ಹುಲಿಗಿ, ಸಂಗೀತ ಭಾರತಿ ಸಂಸ್ಥಾಪಕ ಅಧ್ಯಕ್ಷ ಕಲ್ಲಂಭಟ್, ಕೊಪ್ಪಳ ತಾ.ಪಂ.ಮಾಜಿ ಅಧ್ಯಕ್ಷ ಬಾಲಚಂದ್ರನ್, ಕೊಪ್ಪಳ ತಾ,ಪಂ.ಮಾಜಿ ಸದಸ್ಯ ಯಂಕಪ್ಪ ಹೊಸಳ್ಳಿ, ಗಂಗಾವತಿ ನಗರಸಭೆ ಮಾಜಿ ಅಧ್ಯಕ್ಷ ಕೆ.ವೆಂಕಟೇಶ್ ಭಾಗವಹಿಸುವರು. ಅತಿಥಿಗಳಾಗಿ ಮುನಿರಾಬಾದ್ ಗ್ರಾ.ಪಂ. ಅಧ್ಯಕ್ಷ ಅಯ್ಯೂಬ್ ಖಾನ್, ಗ್ರಾ.ಪಂ.ಸದಸ್ಯ ಶೇರ್‌ಖಾನ್, ಜೀವನಾಡಿ ತುಂಗಭದ್ರ ಪಾಕ್ಷೀಕ ಪತ್ರಿಕೆ ಸಂಪಾದಕ ಎಂ.ಆರ್. ವೆಂಕಟೇಶ್ ಭಾಗವಹಿಸುವರು. ಹೊಸಪೇಟೆ ರೋಟರಿ ಕ್ಲಬ್ ಮಾಜಿ ಅಧ್ಯಕ್ಷ ಎಸ್. ಈಶ್ವರ್, ಅನ್ಮೋಲ್ ಟೈಮ್ಸ್ ಪತ್ರಿಕೆ ಸಂಪಾದಕರು ಹಾಗು ನಟ ನಾಗರಾಜ್ ಇಂಗಳಗಿ, ಗಂಗಾವತಿ ರೋಟರಿ ರೈಸ್ ಬೌಲ್ ಅಧ್ಯಕ್ಷೆ ಗೀತಾ ಚೌದ್ರಿ ಹಾಗು ಪ್ರಧಾನ ಕಾರ್ಯದರ್ಶಿ ಭಾರತಿ ಅಗಲೂರು ಇವರು ಉಪಸ್ಥಿತರಿರುವರು. ನಟನೆ, ಹಾಡುಗಾರಿಕೆ ಹಾಗು ನಿರೂಪಣೆ ಕ್ಷೇತ್ರದಲ್ಲಿ ಸಾಧನೆ ಗೈದ ಚಲನಚಿತ್ರ ನಟಿ ಕವಿತಾ ಮೋಹನ್, ಕಾರ್ಮಿಕರಿಗಾಗಿ ಹಗಲಿರುಳು ಶ್ರಮಿಸುತ್ತಿರುವ ಕಲ್ಯಾಣ ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಶಿವುಕುಮಾರ್ ಗೌಡ ಗಂಗಾವತಿ ಇವರನ್ನು ಸನ್ಮಾನಿಸಲಾಗುವುದು. ನಂತರ ಕಲಾಧ್ವನಿ ಸೇವಾ ಟ್ರಸ್ಟ್ ಹೊಸಪೇಟೆ ಹಾಗು ಹೊಸಪೇಟೆಯ ಶ್ರೀ ಅಂಜಲಿ ಭರತನಾಟ್ಯ ಕಲಾ ಕೇಂದ್ರದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವವು ಎಂದು ಅವರು ವಿವರಿಸಿದ್ದಾರೆ. ಉಚಿತ ತಪಾಸಣಾ ಶಿಬಿರದ ಕುರಿತು ಹೆಚ್ಚಿನ ಮಾಹಿತಿ ಬೇಕಾದಲ್ಲಿ 8073497461, 7259328861 ಹಾಗು 6360602705 ಈ ಸಂಖ್ಯೆಯನ್ನು ಸಂಪರ್ಕಿಸಲು ಅನ್ಮೋಲ್ ಆಹ್ಮದ್ ಖಾದ್ರಿ ಮನವಿ ಮಾಡಿದ್ದಾರೆ.

# ತಡವಲಗಾ: ಅರ್ಥಪೂರ್ಣ ಬನ್ನಿ ಹಬ್ಬ ಆಚರಣೆ

**ಇಂಡಿ :** ತಾಲ್ಲೂಕಿನ ತಡವಲಗಾ ಗ್ರಾಮದಲ್ಲಿ ಬನ್ನಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು.
ನವರಾತ್ರಿಯ ಹತ್ತನೇ ದಿನ ದಸರಾ ಅಥವಾ ವಿಜಯ ದಶಮಿ ಆಚರಿಸುತ್ತಾರೆ.
ನವರಾತ್ರಿಯಲ್ಲಿ ದಸರಾ ಪ್ರಮುಖವಾದ ಆಚರಣೆ. ಈ ದಿನದಂದು ಬನ್ನಿ ಮರವನ್ನು ಪೂಜಿಸುವುದು ವಾಡಿಕೆ. ಕಿರಿಯರು ಹಿರಿಯರಿಗೆ ಬನ್ನಿ ಎಲೆಗಳನ್ನು ನೀಡುವ ಮೂಲಕ ಆಶೀರ್ವಾದ ಪಡೆಯುತ್ತಾರೆ.
ಈ ದಿನ ಬನ್ನಿ ಎಲೆಗಳನ್ನು ಚಿನ್ನದಂತೆ ಹಂಚಲಾಗುತ್ತದೆ. ಅದರಂತೆ ಇಂಡಿ ತಾಲ್ಲೂಕಿನ ತಡವಲಗಾ ಗ್ರಾಮದಲ್ಲಿ ಕೂಡಾ ? ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಮರುಳಸಿದ್ದೇಶ್ವರ
ಪಲ್ಲಕ್ಕಿ ಮೆರವಣಿಗೆ ತಡವಲಗಾ ಗ್ರಾಮದ ಹೀರೆಮಠ ಅಭಿನವ ರಾಚೋಟೇಶ್ವರ ಶಿವಾಚಾರ್ಯರು ಹಾಗೂ ಪ್ರೀತಂ ದೇವರ ದಿವ್ಯ ಸಾನ್ನಿಧ್ಯದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಡವಲಗಾ ಗ್ರಾಮದ ಹೊರವಲಯದಲ್ಲಿ ಇರುವ ಬನ್ನಿ ಕಟ್ಟಿ ತಲುಪಿತು.
ಅಲ್ಲಿ ಸಾಂಪ್ರದಾಯಿಕ ಪ್ರಕಾರ ಬನ್ನಿ ? ಮರಕ್ಕೆ ಅಭಿನವ ರಾಚೋಟೇಶ್ವರ ಶಿವಾಚಾರ್ಯರು ಹಾಗೂ ಪ್ರೀತಂ ದೇವರ ದಿವ್ಯ ಸಾನ್ನಿಧ್ಯದಲ್ಲಿ ಗ್ರಾಮದ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

# ವೈದ್ಯ ವೃತ್ತಿ ಆದಾಯ ವೃತ್ತಿ ಅಲ್ಲ ಸೇವಾ ವೃತ್ತಿ ಎಂದು ಭಾವಿಸಿ : ಮಾಜಿ ಶಾಸಕ ಕುಮಠಳ್ಳಿ

**ಅಥಣಿ :** ವೈದ್ಯಕೀಯ ವೃತ್ತಿ ಅತ್ಯಂತ ಪವಿತ್ರವಾದುದು ಎಂದಿಗೂ ವೈದ್ಯಕೀಯ ಸೇವೆಯನ್ನು ಆದಾಯದ ವೃತ್ತಿ ಎಂದು ಭಾವಿಸದೆ ಸೇವೆಯೆಂದು ಭಾವಿಸಿ ಶಿವಯೋಗಿಗಳ ಪುಣ್ಯ ಕ್ಷೇತ್ರದಲ್ಲಿ ಸತತವಾಗಿ ಅವಿರತ ಮೂವತ್ತು ವರ್ಷ ವೈದ್ಯಕೀಯ ಸೇವೆ ಸಲ್ಲಿಸಿದ್ದು ಸಾರ್ಥಕವಾದುದು ಎಂದು ಮಾಜಿ ಶಾಸಕ ಮಹೇಶ ಕುಮಟಳ್ಳಿ ಹೇಳಿದರು.
ಅಥಣಿ ಪಟ್ಟಣದ ಕುಮಠಳ್ಳಿ ಅವರ ದಂತ ಚಿಕಿತ್ಸೆ ಆಸ್ಪತ್ರೆಯಲ್ಲಿ ಡಾ.ಪ್ರಕಾಶ ಕುಮಠಳ್ಳಿ ಹಾಗೂ ಅವರ ಧರ್ಮಪತ್ನಿ ಜ್ಯೋತಿ ಕುಮಟಳ್ಳಿ ವೈದ್ಯಕೀಯ ಕ್ಷೇತ್ರದಲ್ಲಿ ತಮ್ಮ ಮೂವತ್ತು ವರ್ಷದ ಸೇವೆ ಪೂರೈಸಿದ ಪ್ರಯುಕ್ತ ವಿಶೇಷ ಪೂಜೆ ಸಲ್ಲಿಸಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು ಅಥಣಿ ಪುಣ್ಯ ನೆಲದಲ್ಲಿ ಡಾ.ಪ್ರಕಾಶ ಕುಮಠಳ್ಳಿಯವರ ಮೂವತ್ತು ವೈದ್ಯಕೀಯ ಸೇವೆ ಅಪಾರ ಹಾಗೂ ಅನುಕರಣೀಯವಾದುದು. ಬರುವ ದಿನಮಾನದಲ್ಲಿ ಪಟ್ಟಣ ಸೇರಿದಂತೆ ರಾಜ್ಯದ ಜನರಿಗೆ ಇನ್ನೂ ಹೆಚ್ಚಿನ ಹಾಗೂ ಉತ್ತಮ ಗುಣಮಟ್ಟದ ಸೇವೆ ಮಾಡುವುದಕ್ಕೆ ನನ್ನ ಸಹೋದರ ಪ್ರಕಾಶ ಕುಮಠಳ್ಳಿ ಹಾಗೂ ಅವರ ಧರ್ಮಪತ್ನಿ ಜ್ಯೋತಿ ಕುಮಟಳ್ಳಿ ಇಬ್ಬರಿಗೂ ಮಹಾತಪಸ್ವಿ ಶಿವಯೋಗಿಗಳು ಇನ್ನೂ ಹೆಚ್ಚಿನ ಶಕ್ತಿ ನೀಡಲಿ ಎಂದು ಮಾಜಿ ಶಾಸಕ ಮಹೇಶ ಕುಮಠಳ್ಳಿ ಶುಭ ಹಾರೈಸಿದರು.
ಈ ವೇಳೆ ಮೂವತ್ತು ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿದ ಡಾ.ಪ್ರಕಾಶ ಕುಮಠಳ್ಳಿ ಮಾತನಾಡಿ ಅಥಣಿ ನೆಲದಲ್ಲಿ ಶಿವಯೋಗಿಗಳ ಆಶೀರ್ವಾದದಿಂದ ನಾಡಿನ ಜನತೆಯ ಪ್ರೀತಿ ವಿಶ್ವಾಸದ ಫಲವಾಗಿ ವೈದ್ಯಕೀಯ ಕ್ಷೇತ್ರದಲ್ಲಿ ನಾನು ಮೂವತ್ತು ವರ್ಷ ಸುಧೀರ್ಘ ಸೇವೆ ಸಲ್ಲಿಸಲು ಸಾಧ್ಯವಾಗಿದೆ, ದಂತ ವೈದ್ಯರಾದ ನಾನು ಹಾಗೂ ನನ್ನ ಧರ್ಮಪತ್ನಿ ಜ್ಯೋತಿ ಕುಮಠಳ್ಳಿ ಅಥಣಿ ಪಟ್ಟಣ ಅಲ್ಲದೇ ತಾಲೂಕಿನ ಎಲ್ಲ ಗ್ರಾಮಗಳ ಮತ್ತು ಸುತ್ತಮುತ್ತಲಿನ ತಾಲೂಕುಗಳ ಜನ-ರಿಗೆ ಚಿಕಿತ್ಸೆಗೆ ಸಂಬಂಧಿಸಿದಂತೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ವೈದ್ಯೋಪಚಾರದ ಸೇವೆ ಒದಗಿಸಿದ್ದೇವೆ. "ರೋಗಿಗಳ ಸೇವೆಯೆ ದೇವರ ಸೇವೆಯೆಂದು" ವೈದ್ಯಕೀಯ ಕ್ಷೇತ್ರ ಆಯ್ಕೆ ಮಾಡಿಕೊಂಡು 30 ವರ್ಷಗಳ ವೈದ್ಯಕೀಯ ಸೇವೆ ಸಂಪೂರ್ಣ ಗೊಳಿಸಿರುವದು ನಮ್ಮ ಸೌಭಾಗ್ಯವಾಗಿದೆ ಎಂದು ತಿಳಿಸಿದರು. ಹಲ್ಲುಗಳ ಆರೋಗ್ಯ ಹೇಗೆ ಕಾಪಾಡಿಕೊಳ್ಳಬೇಕು ಎಂಬುವುದರ ಕುರಿತು, ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮ ಮತ್ತು ಬಾಯಿ ಕ್ಯಾನ್ಸರ್ ಬಗ್ಗೆ ಗ್ರಾಮೀಣ ಭಾಗದಲ್ಲಿ ಅನೇಕ ಸಾಮಾಜಿಕ ಜಾಗ್ರುತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಹಲ್ಲುಗಳ ಸುರಕ್ಷತೆಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಇನ್ನೂ ಅನೇಕ ಆರೋಗ್ಯ ಶಿಬಿರ, ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಕಲ್ಪ ನಮ್ಮದಾಗಿದೆ ಮತ್ತು ಕುಮಠಳ್ಳಿ ಪರಿವಾರದ 2ನೇ ತಲೆಮಾರಿನ ನಾಲ್ವರು ಯುವ ವೈದ್ಯರು ವಿವಿಧ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿ ಮುಂದಿನ ದಿನಗಳಲ್ಲಿ ವೈದ್ಯಕೀಯ ಸೇವೆ ಸಲ್ಲಿಸಲು ಉತ್ಸುಕರಾಗಿದ್ದಾರೆ ಎಂದು ಹೇಳಿದರು.
ಈ ವೇಳೆ ಮುಖಂಡರಾದ ದಿಗ್ವಿಜಯ ಪವಾರದೇಸಾಯಿ, ರಮೇಶಗೌಡ ಪಾಟೀಲ್, ಮುತ್ತಣ್ಣ ಸಂತಿ, ನಾನಾಸಾಬ ಅವತಾಡೆ , ಸಿದ್ದಪ್ಪ ಮುದಕಣ್ಣವರ, ಮಲ್ಲಪ್ಪಾ ಹಂಚಿನಾಳ, ಸಿದ್ದು ಹಂಡಗಿ, ಸಿದ್ದು ಪಾಟೀಲ, ಡಾ.ಅರ್ಥವ ಕುಮಠಳ್ಳಿ, ಶಿವಾನಂದ ಸಿಂಧೂರ. ಉದ್ಯಮಿ ಮುರಗೇಶ ಕುಮಠಳ್ಳಿ, ಸೇರಿದಂತೆ ಹಲವರು ಗಣ್ಯರು ಹಾಗೂ ಕುಮಠಳ್ಳಿ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

# ನರೇಗಾ ಡಿಜಿಟಲ್ ಕ್ಯೂ ಆರ್ ಕೊಡ ಸ್ಕ್ಯಾನ್ ಬಳಸಿ ಕಾಮಗಾರಿ ಬೇಡಿಕೆ ಸಲ್ಲಿಸಿ ಹನುಮಂತಗೌಡ ಪೋ. ಪಾಟೀಲ್

● ವಾರ್ತಾಲೋಕ ವಾರ್ತೆ


**ಕೊಪ್ಪಳ: ಅ 18.** ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಪ್ರತಿ ಗ್ರಾಮಗಳ ರೈತರು ಯುವಕರು ನೇರೆಗಾ ಕಾಮಗಾರಿಯನ್ನು
ಕ್ಯೂಆರ್ ಕೋಡ್ ಸ್ಕ್ಯಾನ್ ಬಳಸಿ ಅರ್ಜಿ ಸಲ್ಲಿಸಬಹುದು ಉದ್ಯೋಗ ಖಾತ್ರಿ ನಡೆಗೆ ಸಬಲತೆ ಅಭಿಯಾನ ಕಡೆ ಎಂದು ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಹನುಮಂತಗೌಡ ಪೊಲೀಸ್ ಪಾಟೀಲ್ ಹೇಳಿದರು ತಾಲೂಕಿನ ಹಿರೇ ಅರಳಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ 2025 ಮತ್ತು 2026 ನೇ ಸಾಲಿನ ಕಾರ್ಮಿಕ ಆಯವ್ಯಯ ಹಾಗೂ ಕ್ರಿಯ ಯೋಜನೆ ತಯಾರಿಕೆಯ ಉದ್ಯೋಗ ಖಾತ್ರಿ ನಡೆಗೆ ಸಬಲತೆಯಡೆಗೆ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಪ್ರತಿ ವರ್ಷದಂತೆ ಅಕ್ಟೋಬರ್ 2ರಿಂದ ಕ್ರಿಯಾ ಯೋಜನೆ ತಯಾರಿಕೆ ಪ್ರತಿಕ್ರಿಯೆ ಆರಂಭವಾಗಿದ್ದು
ಅದರಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಮತ್ತು ಗ್ರಾಮಸ್ಥರು ರೈತರು ನರೇಗಾ ಯೋಜನೆ ಕಾಮಗಾರಿ ಬೇಡಿಕೆಯನ್ನು ಕ್ಯೂ ಆರ್ ಕೊಡ ಬಳಸಿ ಅರ್ಜಿ ಸಲ್ಲಿಸಬಹುದು ಈ ಬಾರಿ ಡಿಜಿಟಲ್ ತಂತ್ರಜ್ಞಾನ ಅಳವಡಿಸಿದ್ದು ರೈತರು ಯುವಕರು ತಮ್ಮ ಮೊಬೈಲ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು ಫಲಾನುಭವಿಗಳು ಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದು ಎಂದು ತಿಳಿಸಿದರು
ಈ ಕಾಮಗಾರಿಯನ್ನು ಫಲಾನುಭವಿಗಳು ತಮ್ಮ ಮೊಬೈಲಿನಲ್ಲಿ ಅರ್ಜಿ ಸಲ್ಲಿಸಬಹುದು ಇದರಿಂದ ಫಲಾನುಭವಿ ನೇರವಾಗಿ ಅರ್ಜಿ ಸಲ್ಲಿಸುವುದರಿಂದ ಮಧ್ಯವರ್ತಿಗಳ ಇಲ್ಲದೆ ಕಾಮಗಾರಿ ಕ್ರಿಯಾಯೋಜನೆಯಾಗುತ್ತದೆ
ಈ ಎಲ್ಲಾ ಕಾಮಗಾರಿಗಳನ್ನು ಸಂಗ್ರಹಿಸಿ ಆದ್ಯತಾ ಪಟ್ಟಿಯ ತಯಾರಿಸಿ ಗ್ರಾಮ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುತ್ತದೆ ಇದರಿಂದಾಗಿ ನೈಜ ಫಲಾನುಭವಿಗಳಿಗೆ ಅವಕಾಶ ಸಿಗುವಂತಾಗಿದೆ ಎಂದರು ಗ್ರಾಮ ಪಂಚಾಯಿತಿ ಪಿ ಡಿ ಓ ಸೋಮಪ್ಪ ಪೂಜಾರ್ ಮಾತನಾಡಿ ಅಕ್ಟೋಬರ್ ತಿಂಗಳ ಅಂತ್ಯದವರೆಗೆ ವಿಶೇಷ ಐಇಸಿ ಅಭಿಯಾನದಡಿಯಲ್ಲಿ ಮನೆ ಮನೆಗೆ ಭೇಟಿ ಮಾಡಿ ಕಾಮಗಾರಿ ಬೇಡಿಕೆ ಪಟ್ಟಿಯಲ್ಲಿ ಕಾಮಗಾರಿಗಳನ್ನು ಸಂಗ್ರಹಿಸಲಾಗುತ್ತಿದ್ದು ನರೇಗಾ ಫಲಾನುಭವಿಗಳು ಕಾಮಗಾರಿಗಳ ಅರ್ಜಿಗಳನ್ನು ಪೆಟ್ಟಿಗೆಯಲ್ಲಿ ಹಾಕಬಹುದು ಸದರಿ ಕಾಮಗಾರಿಗಳನ್ನು ತಾಂತ್ರಿಕ ಸಂಯೋಜಕರು ಪೂರ್ವಭಾವಿಯಾಗಿ ವೀಕ್ಷಣೆ ಮಾಡಿ ಅಂದಾಜು ಪತ್ರಿಕೆ ತಯಾರಿಸುತ್ತಾರೆ ಅದೇ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಇಡುವುದರಿಂದ ಎಲ್ಲಾ ಕಾಮಗಾರಿಗಳು ಕಡ್ಡಾಯವಾಗಿ ಅನುಷ್ಠಾನ ಮಾಡಬಹುದು ಎಂದರು
ಕಾರ್ಯಕ್ರಮದಲ್ಲಿ ತಾಲೂಕು ಐಇಸಿ ಸಂಯೋಜಕ ಶರಣಪ್ಪ ಹಾಲಕೇರಿ ಅವರು ಗ್ರಾಮದ ಯುವಕರು ಮೊಬೈಲಿನಲ್ಲಿ ಸ್ಕ್ಯಾನ್ ಮಾಡಿಸಿ ಅರ್ಜಿ ಸಲ್ಲಿಸುವ ಮಾಹಿತಿ ತಿಳಿಸಿಕೊಟ್ಟರು ಸ್ಥಳದಲ್ಲಿ 10 ಜನರಿಂದ ಅರ್ಜಿ ಹಾಕಿಸಲಾಯಿತು
ತಾಂತ್ರಿಕ ಸಹಾಯಕ ಸಂಗಮೇಶ್ ಕರಾವಸೂಲಿಗಾರರ ಗಂಗಮ್ಮ ಡಿ ಇ ಓ ಶೇಖರ್ ಕಾಯಕ ಮಿತ್ರರಾದ ಶಾಂತಮ್ಮ ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಪಂಚಾಯಿತಿ ಸಿಬ್ಬಂದಿಗಳು ಸಿಬ್ಬಂದಿಗಳು ಮತ್ತು ಎಲ್ಲಾ ಗ್ರಾಮಸ್ಥರು ಮತ್ತು ಮುಖಂಡರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು
ವರದಿ ಮಂಗಳೇಶ ಎಸ್ ಮಂಗಳೂರು

# ಸಾವಿರಾರು ಎಕರೆ ಭೂಮಿ ಕಿತ್ತುಕೊಳ್ಳಲು ಹುನ್ನಾರ:ಕೂಚಬಾಳ



**ತಾಳಿಕೋಟೆ :** ಇತ್ತಿಚಗೆ ಜಮೀರಅಹ್ಮದ ಖಾನ ಮಂತ್ರಿಗಳು ವಿಜಯಪುರಕ್ಕೆ ಬಂದಾಗ ವಕಫ್‌ದ ಅಸ್ತಿ ಎಂದು ನೊಂದಣಿ ಮಾಡಲು ಹೇಳಿ ಹೋಗಿದ್ದಾರೆ ಈಗಾಗಲೇ ಜಮೀನುದಾರರಿಗೆ ನೋಟೀಸು ಕೂಡಾ ಜಾರಿ ಮಾಡಿದ್ದಾರೆ ಇದು ಸಂವಿದಾನ ಭಾಹಿರವಾದ ಕಾನೂನು ಭಾಹಿರವಾಗಿ ಮಾಡಿರತಕ್ಕಂತಹದ್ದು ಇದನ್ನು ನಾನು ಭಲವಾಗಿ ಖಂಡಿಸುತ್ತೇನೆಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ) ಅವರು ಹೇಳಿದರು.
ರವಿವಾರರಂದು ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ಈ ಆಸ್ತಿಗಳು ಮೂಲತಾ 1973ರಲ್ಲಿ ಗೆಜೆಟ್ ನೋಟಿಪಿಕೇಶನ್ ಆಗಿದೆ ಗೆಜಿಟ್ ನೋಟೀಪಿಕೇಶನ್ ಆದಾಗ್ಯೂ ಕೂಡಾ ಯಾವುದು ಪರಿಶೀಲನೆ ಇಲ್ಲದೇ ಯಾವುದೂ ಸ್ಥಾನಿಕ ಚೌಕಸಿ ಇಲ್ಲದೇ ಆಗಿರತಕ್ಕಂತದ್ದು ಇದೆ ಅದು 42, 43 ವರ್ಷ ಆಗಿದೆ ಅದು ಆದ ನಂತರ ಈಗ ಎಂಟ್ರಿ ಮಾಡ್ರಿ ಎಂದು ಸಚಿವ ಜಮೀರ್‌ಅಹ್ಮದಖಾನ್ ಆದೇಶ ಮಾಡಿರುವದು ಸ್ವಾರ್ಥದ ನಡಿಗೆಯ ಮೇಲೆ ಮತ್ತೊಂದು ಹೆಜ್ಜೆ ಇಟ್ಟಂತಾಗಿದೆ ಎಂದರು.
ಈಗಾಗಲೇ ಕೇಂದ್ರ ಸರ್ಕಾರವು ವಕಫ್‌ದ ಕಾಯ್ದೆ ರದ್ದು ಮಾಡಬೇಕೆಂದು ಪಾರ್ಲಿಮೇಂಟ್‌ನ ಸೇಶನ್‌ದಲ್ಲಿ ಬೀಲ್ ಮಂಡನೆ ಮಾಡಿದೆ ಇದಕ್ಕೆ ಸಂಬಂದಿಸಿ ಕಮಿಟಿ ಮಾಡಿದೆ ಆ ಸಮಿತಿ ವರಧಿ ಬರುವ ಮುಂಚೆಯೇ ತರಾತುರಿಯಲ್ಲಿ ಬಂದು ಸಚೀವರು ಹೇಳಿರುವದು ಏಷ್ಟು ಸರಿ ಇದರಿಂದ ಸ್ವಾರ್ಥ ಅಡಗಿದೆ ಎಂಬುದು ಕಾಣುತ್ತಿದೆ ಇದರಲ್ಲಿ ಏಷ್ಟೋ ಜನ ರೈತರ ಜಮೀನುಗಳು ಇವೆ, ಏಷ್ಟೋ ದೇವಸ್ಥಾನಗಳ ಜಮೀನುಗಳಿವೆ, ಏಷ್ಟೋ ಸರ್ಕಾರಿ ಜಮೀನುಗಳಿವೆ ಸಾವಿರಾರು ಎಕರೆ ಭೂಮಿ ಇದೆ ಅವುಗಳೆಲ್ಲವನ್ನೂ ಎಂಟ್ರಿ ಮಾಡ್ರಿ ಎಂದು ಹೇಳಿರುವದು ಕಾನೂನು ಭಾಹಿರವಾಗಿದೆ ಇದಕ್ಕೆ ಅಧಿಕಾರಿಗಳು ಕವಿ ಗೊಡಬಾರದು ಯಾವದೇ ರೀತಿಯ ಕಾನೂನು ಭಾಹಿರ ಚಟುವಟಿಕೆಗೆ ಅವಕಾಶ ಕೊಡಬಾರದು ಎಂದು ಒತ್ತಾಯಿಸುತ್ತೇನೆಂದ ಅವರು ಹುಬ್ಬಳ್ಳಿ ನಗರದಲ್ಲಿ ಹಿಂದೆ ನಡೆದ ಗಲಾಟೆಯಲ್ಲಿ ಪೊಲೀಸ್ ಠಾಣೆಗೆ ನುಗ್ಗಿ ದಾಳಿ ಮಾಡಿರುವದು ಅಧಿಕಾರಿಗಳ ಮೇಲೆ ದಾಳಿ ಮಾಡಿರುವದು ದೃಶ್ಯಮಾದಮದಲ್ಲಿ ನೇರ ಪ್ರಸಾರವಾಗಿದೆ ಅಷ್ಟೆಲ್ಲಾ ಪ್ರಕರ್ಣವಾಗಿದ್ದರೂ ಕೂಡಾ ಅವರನ್ನು ಅಮಾಯಕರು ಎಂದು ಕೇಸ್‌ನ್ನು ಹಿಂಪಡೆದುಕೊಳ್ಳುವಂತಹ ಕೆಲಸ ಕಾಂಗ್ರೇಸ್ ಸರ್ಕಾರದ ಮಂತ್ರಿಗಳು ಮಾಡುತ್ತಿದ್ದಾರೆ ಬರೀ ತುಷ್ಟಿಕರಣ, ಓಲೈಕೆ ರಾಜಕಾರಣ, ಮತಬ್ಯಾಂಕ್ ರಾಜ-ಕಾರಣ ಇಟ್ಟುಕೊಂಡು ಇದರೊಳಗೆ ತೊಡಗಿಕೊಂಡಿದ್ದಾರೆ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳಿಲ್ಲಾ, ಅಭಿವೃದ್ಧಿ ಕಾರ್ಯಕ್ರಮಗಳಿಲ್ಲಾ ಕೇವಲ ಒಂದೇಡೆ ಬ್ರಷ್ಟಾಚಾರ, ಮತ್ತೊಂದು ತುಷ್ಠಿಕರಣದಲ್ಲಿ ತೊಡಗಿದ್ದಾರೆ ಕಾಂಗ್ರೇಸ್ ಪಾರ್ಟಿ ಅಂ-ದರೆ ಮುಸ್ಲಿಂರ ಪಾರ್ಟಿ ಎಂಬಂತಾಗಿದೆ ಎಲ್ಲರ ಸಹನೆಗೆ ಮಿತಿ ಇದೆ ಸಹನೆ ಮೀರಿದರೆ ಜನರು ತಕ್ಕ ಉತ್ತರ ನೀಡಲಿದ್ದಾರೆಂದ ಅವರು ದೇಶದ ವಿರೋಧಿ ಘೋಷಣೆ ಕೂಗಿದವರು, ಪಾಕಿಸ್ಥಾನ ಜಿಂದಾಬಾದ್ ಎಂದು ಕೂಗಿದವರೂ ಕೂಡಾ ಅವರ ಕಣ್ಣಿಗೆ ಅಮಾಯಕರಾಗಿ ಕಾಣುತ್ತಿದ್ದಾರೆ ಎಲ್ಲಿ ಬಾಂಬ್ ಬ್ಲಾಸ್ಟ್ ಮಾಡಿ ದೇಶ ದ್ರೋಹಿ ಚಟುವಟಿ-ಕೆಗಳನ್ನು ತೊಡಗಿಕೊಂಡಿರುತ್ತಾರೋ ಅವರೂ ಕೂಡಾ ಈ ಕಾಂಗ್ರೇಸ್‌ನವರಿಗೆ ಅಮಾಯಕರ ಹಾಗೆ ಕಾಣಿಸುತ್ತಾರೆ ಇಂತಹ ದೇಶ ದ್ರೋಹಿ ಚಟುವಟಿಕೆ ನಡೆಸುವವ-ರಿಗೆ ಕುಮ್ಮಕ್ಕು ನೀಡುವ ಕಾಂಗ್ರೇಸ್‌ನವ-ರಿಂದ ದೇಶ ಸುಭದ್ರಗೊಳಿಸಲು ಹೇಗೆ ಸಾದ್ಯವೆಂದು ಪ್ರಶ್ನೀಸಿದ ಅವರು ಕೇವಲ ಮತಬ್ಯಾಂಕಿಗೋಸ್ಕರ ದೇಶದ್ರೋಹಿಗಳನ್ನು ರಕ್ಷೀಸುವದರ ಜೊತೆಗೆ ಅವರಿಗೆ ಕುಮ್ಮಕ್ಕು ನೀಡುವದು ಏಷ್ಟು ಸರಿ ಕೂಡಲೇ ಸಚಿವ ಜಮೀರ್ ಅಹ್ಮದಖಾನ ಅವರು ಮಾಡಿರುವ ಆದೇಶವನ್ನು ಹಿಂಪಡೆಯದಿದ್ದರೆ ಎಲ್ಲ ಜನರು ಬೀದಿಗಿಳಿದು ಹೋರಾಟದ ಹಾದಿ ಹಿಡಿಯಲಿದ್ದಾರೆಂದು ಏಚ್ಚರಿಸಿದರು.
ಈ ಸಮಯದಲ್ಲಿ ಮುಖಂಡರುಗಳಾದ ರಾಘವೇಂದ್ರ ಚವ್ಹಾಣ, ಮಂಜುನಾಥ ಶೆಟ್ಟಿ, ಸುರೇಶ ಹಜೇರಿ, ಮುದಕಣ್ಣ ಬಡಿಗೇರ, ರಾಮು ಜಗತಾಪ, ಮೊದಲಾದವರು ಇದ್ದರು. ದೇಶ ವಿರೋಧಿ ಘೋಷಣೆ ಕೂಗಿದವರು, ಮತ್ತು ಚಟುವಟಿಕೆಗಳಲ್ಲಿ ಭಾಗಿಯಾದವರು, ಬಾಂಬ್ ಬ್ಲಾಸ್ಟ ಮಾಡಿದವರು, ಕಾಂಗ್ರೇಸ್‌ನವರ ಕಣ್ಣಿಗೆ ಅಮಯಕರಾಗಿ ಕಾಣಿಸುತ್ತಿದ್ದಾರೆ ಅವರ ಮೇಲಿನ ಕೇಸ್‌ಗಳನ್ನು ಹಿಂಪಡೆದುಕೊಳ್ಳುತ್ತಿದ್ದಾರೆ ಇಂತಹ ಕಾಂಗ್ರೇಸ್ಸಿಗರಿಂದ ದೇಶ ಸುಭದ್ರಗೊಳ್ಳಲು ಹೇಗೆ ಸಾದ್ಯ.
ಆರ್.ಎಸ್.ಪಾಟೀಲ(ಕೂಚಬಾಳ)
ಬಿಜೆಪಿ ಜಿಲ್ಲಾ ಅಧ್ಯಕ್ಷ

# ಪೌರಕಾರ್ಮಿಕರ ಸೇವೆಗೆ ಎಷ್ಟು ಗೌರವ ನೀಡಿದರೂ ಸಾಲದು



**ಮಹಾಲಿಂಗಪುರ:** ಸಮೀಪದ ರನ್ನಬೆಳಗಲಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಪೌರಕಾರ್ಮಿಕರಿಗೆ ದಸರಾ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ಸ್ಥಳೀಯ ಕಾಂಗ್ರೆಸ್ ಮತ್ತು ಪಕ್ಷದ ಪಟ್ಟಣ ಪಂಚಾಯಿತಿ ಸದಸ್ಯರ ಆಶ್ರಯದಲ್ಲಿ ಭಾನುವಾರ ಉಡುಗೊರೆ ವಿತರಣೆ ಹಾಗೂ ಸತ್ಕಾರ ಸಮಾರಂಭ ನಡೆಯಿತು.
ಪಪಂ ಸದಸ್ಯ ಪ್ರವೀಣ ಪಾಟೀಲ ಮಾತನಾಡಿ, ನಿರ್ಮಲ, ಆರೋಗ್ಯಕರ ಪಟ್ಟಣದ ರೂವಾ-ರಿಗಳೇ ಪೌರಕಾರ್ಮಿಕರು. ಅವರ ಸೇವೆಗೆ ಎಷ್ಟು ಗೌರವ ನಿಡಿದರೂ ಕಡಿಮೆ. ಕರೊನಾ ವೇಳೆ ಯಾವುದೇ ರೀತಿಯ ಮಾರಣಾಂತಿಕ ಕಾಯಿಲೆಗಳಿಗೆ ಹೆದರದೆ ತಮ್ಮ ಆರೋಗ್ಯ ಲೆಕ್ಕಿಸದೆ ಪಟ್ಟಣದ ಜನತೆಯ ಆರೋಗ್ಯಕ್ಕಾಗಿ ಶ್ರಮಿಸಿದ್ದಾರೆ ಎಂದು ತಿಳಿಸಿದರು.
ಪಪಂ ಕಾಂಗ್ರೆಸ್ ಸದಸ್ಯ ನೀಲಕಂಠ ಸೈದಾಪುರ, ಮುಭಾರಕ ಅತ್ತಾರ, ಮುತ್ತು ಸಣ್ಣಟ್ಟಿ, ಮುತ್ತು ನಾಯಕ, ಕಾಂಗ್ರೆಸ್ ಮುಖಂಡರಾದ ಸಂಗಪ್ಪ ಅಮಾತಿ, ಈರಪ್ಪ ಕಿತ್ತೂರ, ಸದಾಶಿವ ಕುಲಗೋಡ, ಮಲ್ಲಪ್ಪ ಮಲಾವಡಿ, ಸಿದ್ದು ಮಾಳಿ, ರಾಮನಗೌಡ ಪಾಟೀಲ, ಯಮನಪ್ಪ ದೊಡಮನಿ, ಯಮನಪ್ಪ ಪೂಜೇರಿ, ಮಲ್ಲು ಹೊಸಪೇಟಿ, ಪ್ರಕಾಶ ಕೊಣ್ಣೂರ, ಮುದಕಪ್ಪ ದೋಬಸಿ, ಚನ್ನಪ್ಪ ಜಾಲಿಕಟ್ಟಿ, ಲಕ್ಕಪ್ಪ ಹಂಚಿನಾಳ, ಬಸು ಗೌರಣ್ಣವರ, ಮಾರುತಿ ಜಾಲಿಕಟ್ಟಿ, ಮಹಾದೇವ ಹಾದಿಮನಿ, ಹಣಮಂತ ಹೊಸೂರ, ಸವಿತಾ ಚವಲಿ, ಪರಮಾನಂದ ಪೂಜೇರಿ, ಮುತ್ತಪ್ಪ ಸಂಕ್ರಟ್ಟಿ, ಚನ್ನಪ್ಪ ಸಾಲಿಮಠ, ಚೇತನ ಕಂಕನವಾಡಿ, ಸುಭಾಸ ಪುರಾಣಿಕ ಇತರರಿದ್ದರು.

# ಸಂವಿಧಾನ ಬದ್ಧ ಹಕ್ಕು ನೀಡಿ



**ಬಾಗಲಕೋಟೆ:** ತಳವಾರ ಸಮುದಾಯಕ್ಕೆ ಎಸ್ಟಿ ಪ್ರಮಾಣ ನೀಡಿ ಸಂವಿಧಾನ ಬದ್ಧ ಹಕ್ಕು ಒದಗಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ತಳವಾರ ಮಹಸಭಾ ವತಿಯಿಂದ ಜಿಲ್ಲಾಡಳಿತ ಭವನ ಎದುರು ಸೋಮವಾರ ಪ್ರತಿಭಟನೆ ನಡೆಸಲಾಯಿಸಲಾಯಿತು.

ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಡಳಿತ ಭವನಕ್ಕೆ ಆಗಮಿಸಿದ ಸಮುದಾಯದ ಮುಖಂಡರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಬಳಿಕ ಜಿಲ್ಲಾಽಕಾರಿ ಜಾನಕಿ ಕೆ.ಎಂ ಅವರ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಮಹಸಭಾದ ಜಿಲ್ಲಾಧ್ಯಕ್ಷ ಚಿನ್ನಪ್ಪ ಅಂಬಿ ಮಾತನಾಡಿ,

ಸಂವಿಧಾನ ಬದ್ಧವಾಗಿರುವ ತಳವಾರ ಸಮುದಾಯದವರಿಗೆ ಎಸ್ಟಿ ಪ್ರಮಾಣಪತ್ರ ನೀಡಲು ಅಽಕಾರಿಗಳು ಒಂದು ಸಮುದಾಯದ ಮಾತು ಕೇಳಿ ಹಿಂದೇಟು ಹಾಕುತ್ತಿದ್ದಾರೆ. ಉಚ್ಚ ನ್ಯಾಯಾಲಯ ತೀರ್ಪಿನ ಅನುಸಾರ ತಳವಾರ ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಿದ್ದಾರೆ. ವಾಲ್ಮೀಕಿ ನಾಯಕ ಜನಾಂಗದವರು ತಳವಾರರಿಗೆ ಎಸ್ಟಿ ಪ್ರಮಾಣ ಪತ್ರ ನೀಡದಂತೆ ಅರ್ಜಿ ಸಲ್ಲಿಸಿದ್ದಾರೆ. ಸಂವಿಧಾನ ಬದ್ಧ ಹಕ್ಕು ನೀಡಲು ಯಾರು ಅಡೆತಡೆ ಮಾಡಬಾರದು ಎಂದರು.

ನಮ್ಮ ಸಮುದಾಯವು ಸಂವಿಧಾನ ಬದ್ಧವಾಗಿದ್ದು, ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿದೆ. ಆದರೆ ವಾಲ್ಮೀಕಿ ಸಮುದಾಯದ ವಿರೋಧದಿಂದ ಪ್ರತ್ಯೇಕವಾಗಿ ಎಸ್ಟಿ ಪ್ರಮಾಣ ಪತ್ರ ನೀಡುವಲ್ಲಿ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಸಮಸ್ಯೆಯನ್ನು ಕೂಡಲೇ ಪರಿಹರಿಸಿ ತಳವಾರ ಸಮುದಾಯದವರಿಗೆ ತಕ್ಷಣ ಎಸ್ ಟಿ ಪ್ರಮಾಣಪತ್ರ ನೀಡಬೇಕು ಎಂದು ಆಗ್ರಹಿಸಿ ಜಿಲ್ಲಾಽಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಮುಖಂಡರಾದ ಪ್ರಭು ಗಸ್ತಿ, ಭೀಮಸಿ ಹುನ್ನೂರ, ಸಿದ್ರಾಮೇಶ ಮೀಸಿ, ಭೀಮಸಿ ತಳವಾರ, ಶಿವಾನಂದ ದೇಸಾಯಿ, ಸಂಗಮೇಶ ನಾಗನೂರ, ಬಸವರಾಜ ಸೋಮಪುರ ಇತರರು ಇದ್ದರು.

# ಕೆರೆ ತುಂಬಿದರೆ ರೈತರಿಗೆ ಅನುಕೂಲ



**ಲೋಕಾಪುರ:** ಮುಧೋಳ ಮತಕ್ಷೇತ್ರದಲ್ಲಿನ ಎಲ್ಲ ಕೆರೆಗಳನ್ನು ಅಭಿವೃದ್ಧಿಪಡಿಸಿ ನೀರು ತುಂಬಿಸಲಾಗಿದ್ದು, ಇದ–ರಿಂದ ಅಂತರ್ಜಲ ಹೆಚ್ಚಾಗಿ ರೈತರು ಫಲವತ್ತಾದ ಬೆಳೆ ಬೆಳೆಯಲು ಅನುಕೂಲವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಹೇಳಿದರು.

ಸಮೀಪದ ದಾದನಟ್ಟಿ ಗ್ರಾಮದ ಕೆರೆಗೆ ಬಾಗಿನ ಅರ್ಪಿಸಿ ಮಾತನಾಡಿ, ಕೆರೆ, ಕಟ್ಟೆ, ಕಾಲುವೆಗಳು ನೀರು ತುಂಬಿದರೆ ಕುಡಿಯುವ ನೀರಿನ ಸಮಸ್ಯೆಯೂ ನೀಗುತ್ತದೆ. ಪೂರ್ವಜರು ನಿರ್ಮಿಸಿದ ಕೆರೆ ಕಟ್ಟೆಗಳನ್ನು ಮುಂದಿನ ಪೀಳಿಗೆಗೆ ರಕ್ಷಣೆ ಮಾಡುವುದು ಎಲ್ಲರ ಹೊಣೆಯಾಗಿದೆ ಎಂದರು.

ಗ್ರಾಪಂ ಸದಸ್ಯ ವೆಂಕಣಗೌಡ ಪೋಲಿಸ್‌ಪಾಟೀಲ ಮಾತನಾಡಿ, ದಾದನಟ್ಟಿ ಕೆರೆಯನ್ನು ಹಲವಾರು ವರ್ಷಗಳಿಂದ ತುಂಬಿಸಿರಲಿಲ್ಲ. ಗ್ರಾಪಂ ಸದಸ್ಯರ, ರೈತ ಮುಖಂಡರ, ಸಾರ್ವಜನಿಕರ ಒತ್ತಾಯದಿಂದ ಸಚಿವರು ಮುತುವರ್ಜಿ ವಹಿಸಿ ನೀರು ತುಂಬಿಸಿ ಬಾಗಿನ ಅರ್ಪಿಸಿದ್ದಾರೆ ಎಂದರು.


ವರ್ಚಗಲ್ ಕೆರೆ ವೀಕ್ಷಿಸಿದ ಸಚಿವರು, ಕೆರೆಗಳ ಸುತ್ತ ಜನ–ರಿಗೆ ವಾಯುವಾಹಿರಕ್ಕಾಗಿ, ಲೈಟಿಂಗ್ ಸಾರ್ವಜನಿಕ–ರಿಗೆ ವಿಶ್ರಾಂತಿಗಾಗಿಬೆಂಚ್ ವ್ಯವಸ್ಥೆ ಇನ್ನಿತರ ಸೌಲಭ್ಯಗಳ ನಿರ್ಮಾಣ–ಕ್ಕಾಗಿ ಒಂದು ಕೋಟಿ ರೂಗಳ ಅನುದಾನ ನೀಡಿದ್ದು ಇದರ ಸದುಪಯೋಗ ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದರು.

ದಾದನಟ್ಟಿ ಗ್ರಾಮದ ಕೆರೆ ಅಭಿವೃದ್ಧಿಗೆ ಜಿರ್ಣೋದ್ಧಾರಕ್ಕಾಗಿ 10 ಲಕ್ಷ ರೂ. ಅನುದಾನ ಹಾಗೂ ಕಿಲ್ಲಾ ಹೊಸಕೋಟಿ ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದ ದುರ್ಗಾದೇವಿ ದೇವಸ್ಥಾನ ನಿರ್ಮಾಣ ಕಾಮಗಾ–ರಿಗೆ ಸಚಿವರು ಭೂಮಿಪೂಜೆ ನೆರವೇರಿಸಿದರು.

ಹಳ್ಳಿ ಹಳ್ಳಿಯಲ್ಲೂ ವಿಶೇಷ ಸನ್ಮಾನ:ಜಿಲ್ಲೆಯ ಏಕೈಕ ಸಹಕಾರಿ ಕ್ಷೇತ್ರದ, ರೈತರ ಜೀವನಾಡಿಯಾದ ತಿಮ್ಮಾಪೂರ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಪುನರ್ ಜೀವನ ಕಲ್ಪಿಸಿ ಪ್ರಾರಂಭಿಸಲು ಮುತುವರ್ಜಿ ವಹಿಸಿ ಸರ್ಕಾರದಿಂದ 40 ಕೋಟಿ ರೂಗಳ ಬ್ಯಾಂಕ್ ಗ್ಯಾರಂಟಿ ನೀಡಿದ ಸಚಿವ ಆರ್.ಬಿ. ತಿಮ್ಮಾಪೂರ ಅವರನ್ನು ಪ್ರತಿ ಗ್ರಾಮದಲ್ಲೂ ರೈತರು ವಿಶೇಷವಾಗಿ ಸನ್ಮಾನಿಸಿದರು.

ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ, ಬಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಶಿವಾನಂದ ಉದಪುಡಿ, ಲೋಕಣ್ಣ ಕೊಪ್ಪದ, ವೆಂಕಣ್ಣಗೌಡ ಪೊಲೀಸ್‌ಪಾಟೀಲ, ರಾಜೇಶ್ವರಿ ಶಿರೂರ, ಅರುಣ ಜೋಗನ್ನವರ, ವೆಂಕಣ್ಣ ಚಿಂಚಖಂಡಿ, ಹಣಮಂತ ಪರಮೇಶ್ವರ, ಗೋವಿಂದಪ್ಪ ದಾಸರ, ಗೋವಿಂದಪ್ಪ ವರ್ಚಗಲ್, ಬಿ.ಎಲ್. ಪೊಲೀಸ್‌ಪಾಟೀಲ, ವೆಂಕಣ್ಣ ಕಮಕೇರಿ, ದೇಸಾಯಿ ಡಂಗಿ, ಪಾಂಡಪ್ಪ ಕಮಕೇರಿ, ಕೃಷ್ಣಾ ಜಟ್ಟೆನ್ನವರ, ಶ್ರವಣ–ಕುಮಾರ ಸೊಕನಾದಗಿ, ತಹಸೀಲ್ದಾರ್ ಮಹಾದೇವ ಸನಮುರಿ, ತಾಲೂಕುಮಟ್ಟದ ಅಧಿಕಾರಿಗಳಾದ ಇಒ ಉಮೇಶ ಸಿದ್ನಾಳ, ಮಹಮ್ಮದ್ ಹನೀಫ್ ತಹಸೀಲ್ದಾರ್, ಮಹೇಶ ದಂಡನ್ನವರ ಇತರ–ರಿದ್ದರು.

# 42 ಕಿ.ಮಿ. ಮ್ಯಾರಥಾನ್‌ನಲ್ಲಿ ಅಮೋಘ ಸಾಧನೆ




**ವಿಜಯಪುರ :** ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ವಿಪ್ರೊ?ರೀ ಮ್ಯಾರಥಾನ್‌ನಲ್ಲಿ ವಿಜಯಪುರ ಸೈಕ್ಲಿಂಗ್ ಗ್ರುಪ್‌ನ ಮೂವರು ಸದಸ್ಯರು 42 ಕಿ.ಮೀ ಓಟ ಪುಲ್ ಮ್ಯಾರಥಾನ್‌ನಲ್ಲಿ ಪಾಲ್ಗೊಂಡು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ, ವಿಶೇಷ ಸಾಧನೆ ತೋರಿದ್ದಾರೆ.

ವಿಜಯಪುರ ಸೈಕ್ಲಿಂಗ್ ಗ್ರುಪ್‌ನ ಸದಸ್ಯ ಪೊಲೀಸ್ ಅಧಿಕಾರಿ ನಿರಂಜನ ಪಾಟೀಲ 42 ಕಿ.ಮೀ ಓಟವನ್ನು 4 ಗಂಟೆ 38 ನಿಮಿಷಗಳಲ್ಲಿ ಪ್ ೂ ರ್ಣ ಗ ೊ ಳಿ ಸಿ ದ್ದಾ ರೆ. ವಿಜಯ ಬಾಗೇಲಿ 6ಗಂಟೆ 13 ನಿಮಿಷಗಳಲ್ಲಿ ಹಾಗೂ ಉದ್ಯಮಿ ವೀರೇಂದ್ರ ಗುಚ್ಚಟ್ಟಿ 6 ಗಂಟೆ 45 ನಿಮಿಷದಲ್ಲಿ ಈ ಓಟವನ್ನು ಪೂರ್ಣಗೊಳಿಸಿದ್ದಾರೆ.

ಈ ಮೂವರ ಸಾಧನೆಗೆ ವಿಜಯಪುರ ಸೈಕ್ಲಿಂಗ್ ಗ್ರುಪ್ ವತಿಯಿಂದ ಬೆಂಗಳೂ–ರಿನಲ್ಲಿಯೇ ವಿಶೇಷ ಗೌರವ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವಿಸಿಜಿ ಅಧ್ಯಕ್ಷ ಡಾ. ಮಹಾಂತೇಶ ಬಿರಾದಾರ ವಿಜಯಪುರದಲ್ಲಿ ಮ್ಯಾರಥಾನ್ ಓಟದ ಪರಿಕಲ್ಪನೆಯೇ ಇರಲಿಲ್ಲ. ಕೇವಲ ಮಿಲಟರಿ ಮತ್ತು ಪೊಲೀಸ್ ನೇಮಕಾತಿಗಾಗಿ ಯುವಕರು ಓಟದ 'ತರಬೇತಿ ಪಡೆಯುತ್ತಿದ್ದರು, ಇತ್ತೀಚಿಗೆ ವಿಜಯಪುರ ಸೈಕ್ಲಿಂಗ್ ಗ್ರುಪ್ ವತಿಯಿಂದ ಓಟದ ಕುರಿತು ಜಾಗೃತಿ ಮೂಡಿಸಿದ ಪರಿಣಾಮ ಯುವಕರು, ಮಧ್ಯವಯಸ್ಕರು ಮತ್ತು ಹಿರಿಯರ ಶರೀರದ ಆರೋಗ್ಯದ ಮೇಲೆ ಆಗುವ ಉತ್ತಮ ಪರಿಣಾಮ ಬಗ್ಗೆ ಅರಿವು ಮೂಡಿದ್ದರಿಂದ ಹೆಚ್ಚು ಹೆಚ್ಚು ಜನರು ಭಾಗವಹಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ಜರಗುವ ವಿಪ್ರೊ?ರ ಮ್ಯಾರಥಾನ ದೇಶದ ಮ್ಯಾರಥಾನ ಓಟದಲ್ಲಿ ಅತ್ಯುತ್ತಮ ಮ್ಯಾರಥಾನಗಳಲ್ಲಿ ಒಂದಾಗಿದೆ. ಈ ಮ್ಯಾರಥಾನ್‌ನಲ್ಲಿ ವಿಸಿಜಿಯ ಮೂವರು ಸದಸ್ಯರು ಪಾಲ್ಗೊಂಡು, 42ಕಿ.ಮೀ ಓಟವನ್ನು ಪೂರ್ಣಗೊಳಿಸಿರುವುದು ವಿಶೇಷ ಸಾಧನೆ ಆಗಿದೆ ಎಂದರು.

ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಕುಮಾರ ದೇಸಾಯಿ ಅವರನ್ನು ಸನ್ಮಾನಿಸಿದರು. ವಿಸಿಜಿ ಉಪಾಧ್ಯಕ್ಷ ಶಿವನಗೌಡ ಪಾಟೀಲ, ಕೋಟಿ ವೃಕ್ಷ ಅಭಿಯಾನ ಸಂಚಾಲಕ ಮುರುಗೇಶ ಪಟ್ಟಣಶೆಟ್ಟಿ, ಸಂಕೇತ ಬಗಲಿ, ಅಪ್ಪು ಭೈರಗೊಂಡ, ರಾಜು ಯಲಗೊಂಡ, ಶ್ರೀಕಾಂತ ಮಂತ್ರಿ, ಸೋಮು ಮಠ, ಅನಿಲ ಧಾರವಾಡಕರ, ರವಿ ಭೈರವಾಡಾಗಿ, ವಿಜಯಕುಮಾರ ಕೋರೆ, ಗುರುಶಾಂತ ಕಾಪಸೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ದಸರಾ ಗೊಂಬೆಗಳು ನಮ್ಮ ಸಂಸ್ಕೃತಿಯನ್ನು ಸಾರುತ್ತವೆ



**ಗುಳೇದಗುಡ್ಡ, :** ದಸರಾ ಆಚರಣೆಯ ಸಂದರ್ಭದಲ್ಲಿ ಮೈಸೂರು ಭಾಗದಲ್ಲಿ ಗೊಂಬೆಗಳ ಪ್ರದರ್ಶನ ಅತ್ಯಂತ ಜನಪ್ರಿಯವಾಗಿದ್ದು, ಉತ್ತರ ಕರ್ನಾಟಕ ಭಾಗದಲ್ಲಿ ಇಂತಹ ಪ್ರದರ್ಶನ ಅಪರೂಪ ಆದರೆ ಪಟ್ಟಣದ ಮುಕ್ತಾ ಅಶೋಕ ಹೆಗಡೆ ಅವರು ಕಳೆದ 10 ವರ್ಷಗಳಿಂದ ಬಹಳಷ್ಟು ಆಕರ್ಷಕ ರೀತಿಯಲ್ಲಿ ವಿವಿಧ ಬಗೆಯ ಕಲಾತ್ಮಕ ಗೊಂಬೆಗಳನ್ನು ಕೂಡಿಸಿ ದಸರಾ ಗೊಂಬೆ ಪ್ರದರ್ಶನ ಮಾಡುತ್ತಿರುವುದು ಗಮನ ಸೆಳೆಯುತ್ತಿದೆ. ಇಂಥಹ ಕಲೆ ಆಚರಣೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕೆಂದು ದೀಪಾ ಶೀಲವಂತ ಹೇಳಿದರು.

ಅವರು ಪಟ್ಟಣದ ಶ್ರೀಮತಿ ಮುಕ್ತಾ ಅಶೋಕ ಹೆಗಡೆ ನಿವಾಸದಲ್ಲಿ ಜರುಗುವ ದಸರಾ ಮಹೋತ್ಸವದ ಅಂಗವಾಗಿ ಮೂರು ದಿನಗಳ ಕಾಲ ನಡೆಯಲಿರುವ ದಸರಾ ಗೊಂಬೆ ಪ್ರದರ್ಶನ ಉದ್ಘಾಟನೆ ನೆರವೇರಿಸಿ ಮಾತನಾಡಿ, ಕಲೆಗೆ ವಿಶೇಷ ಬೆಲೆ ಇದೆ. ಅದರಲ್ಲೂ ದಸರಾ ಗೊಂಬೆ ಪ್ರದರ್ಶನ ಅಪರೂಪದ ಆಚರಣೆಯಾಗಿದೆ ಎಂದರು. ಭಾಗ್ಯಾ ಉದ್ನೂರ ಮಾತನಾಡಿ, ಕಲೆಯನ್ನು ಪ್ರತಿಯೊಬ್ಬರೂ ಆಸ್ವಾದಿಸಬೇಕು. ಕಲಾತ್ಮಕ ಮುತ್ತುಗಳಿಂದ ಸಾಕಷ್ಟು ತೆರನಾದ ವಸ್ತುಗಳನ್ನು ಕಲೆಗೆ ಅಳವಡಿಸಿದ್ದಾರೆ.

ಮೈಸೂರು ಭಾಗದಲ್ಲಿ ಮಾತ್ರ ಕಾಣಿಸುತ್ತಿದ್ದ ದಸರಾ ಗೊಂಬೆ ಪ್ರದರ್ಶನ ಪ್ರದರ್ಶನ ನಮ್ಮ ಭಾಗದಲ್ಲಿ ನೋಡಿ ಬಹಳ ಖುಷಿ ತಂದಿತು ಎಂದರು.

ಕಾರ್ಯಕ್ರಮದಲ್ಲಿ ದಸರಾ ಗೊಂಬೆ ಪ್ರದರ್ಶನ ಮಾಡಿದ ಕಲಾವಿದೆ ಮುಕ್ತಾ ಹೆಗಡೆ, ಸುಮಾ ಹೆಗಡೆ, ಶಿಲ್ಪಾ ಶೀಲವಂತ, ಸುಧಾ ಉಟಗಿ, ನಂದಾ ರಾಜನಾಳ, ಅಶೋಕ ಹೆಗಡೆ, ಸುಜಾತಾ ಕರಡಿಗುಡ್ಡ, ಕಾಳಮ್ಮ ಬಡಿಗೇರ, ಗೌರಮ್ಮ ಕಲಬುರ್ಗಿ, ಬಸವರಾಜ ಹೆಗಡೆ, ಮಾಲಾ ರಾಜನಾಳ, ದ್ರಾಕ್ಷಾಯಣಿ ಗೊಬ್ಬಿ, ಸುರೇಶ ರಾಜನಾಳ, ಮಲ್ಲೇಶ ತಿಮ್ಮರಮಟ್ಟಿ, ಎ.ಜಿ. ಕವಡಿಮಟ್ಟಿ, ಬಸವರಾಜ ಯಳಮೇಲಿ, ಶಶಿಕಲಾ ತಿಪ್ಪಾ, ಶಶಿಕಲಾ ಜಗತಾಪ, ಜಗದೀಶ ಹುಬ್ಬಿಕರ ಇತರರು ಇದ್ದರು.

# ಸರ್ಕಾರ ಕನ್ನಡ ಕಲಿಕೆ ಕಡ್ಡಾಯಗೊಳಿಸಲಿ




**ಜಮಖಂಡಿ** (ಸಿದ್ದೇಶ್ವರ ಮಹಾಸ್ವಾಮಿಗಳ ಪ್ರಧಾನ ವೇದಿಕೆ): ಕನ್ನಡ ಭಾಷೆ ಉಳಿವಿಗಾಗಿ ಗೋಷ್ಠಿಗಳು, ಚಿಂತನ, ಮಂಥನ, ವಿಚಾರ ಸಂಕಿರಣ, ಚರ್ಚೆಗಳು ನಡೆಯಬೇಕು. ಕಡ್ಡಾಯವಾಗಿ ಕನ್ನಡ ಕಲಿಸಬೇಕೆಂದು ಸರ್ಕಾರ ಆದೇಶ ಹೊರಡಿಸಬೇಕೆಂದು ಶಾಸಕ ನಾಡೋಜ ಜಗದೀಶ ಗುಡಗುಂಟಿ ಹೇಳಿದರು.

ನಗರದ ಬಸವ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಘಟಕ, ಜಿಲ್ಲಾ ಘಟಕ ಹಾಗೂ ತಾಲೂಕು ಘಟಕದ ಆಶ್ರಯದಲ್ಲಿ ಭಾನುವಾರ ನಡೆದ ಜಮಖಂಡಿ ತಾಲೂಕು 9ನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಕನಿಷ್ಠ ಪಕ್ಷ 1ನೇ ತರಗತಿಯಿಂದ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ಪಡೆಯಬೇಕು. ನಿರ್ಣಯದಂತೆ ಅನುಷ್ಠಾನವಾಗಬೇಕು. ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ ನೃತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಕೇರಳ ರಾಜ್ಯದಂತೆ ಶೇ.100 ರಷ್ಟು ಸಾಕ್ಷರತೆ ಪ್ರಮಾಣ ಕರ್ನಾಟಕಲ್ಲೂ ಆಗುವಂತೆ ಸರ್ಕಾರ, ಸಂಘ–ಸಂಸ್ಥೆಗಳು ಮುತುವರ್ಜಿ ವಹಿಸಬೇಕು ಎಂದರು.

ಜಮಖಂಡಿ ಸಾಂಸ್ಕೃತಿಕ, ಸಾಮಾಜಿಕ, ಕಲೆ, ಕ್ರೀಡೆಗೆ ಹೆಸರುವಾಸಿಯಾಗಿದೆ. ಕನ್ನಡ ಭಾಷೆ ನಮ್ಮ ಸಂಸ್ಕೃತಿಯಾಗಿದೆ. ಕನ್ನಡ ಭಾಷೆ ವ್ಯವಹಾ–ರಿಕ ಭಾಷೆಯಾಗಬೇಕೆಂದು ಒತ್ತಾಯಿಸಿದರು.

ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಮಾತನಾಡಿ, ಭಾಷೆ ಉಳಿಸಿ ಬೆಳೆಸುವುದಕ್ಕಾಗಿ ವಲಯ, ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನ ನಡೆಸಿಕೊಂಡು ಕನ್ನಡ ಭಾಷೆಗೆ ವಿಶೇಷ ಆದ್ಯತೆ ನೀಡುವ ನಿಟ್ಟಿನಲ್ಲಿ ಸಮ್ಮೇಳನ ಮಾಡುವುದು ಅತ್ಯವಶ್ಯವಾಗಿದೆ ಎಂದರು.

ನಿಕಟ ಪೂರ್ವ ಸಮ್ಮೇಳನಾಧ್ಯಕ್ಷ ಪ್ರೊ. ಬಿ.ಐ. ಕಡ್ಡಿ ಮಾತನಾಡಿದರು.

ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಘಟಕ ಉಪಾಧ್ಯಕ್ಷೆ ಡಾ. ವಿಜಯಲಕ್ಷ್ಮೀ ತುಂಗಳ ಚಿತ್ರಕಲಾ ಮಳಿಗೆಗಳನ್ನು ಉದ್ಘಾಟಿಸಿದರು.

ವೇದಿಕೆ ಹತ್ತದ ಹಿರಿಯ ಸಾಹಿತಿ ತಾತಾಸಾಹೇಬ ಬಾಂಗಿ: ಹಿರಿಯ ಸಾಹಿತಿ, ನ್ಯಾಯವಾದಿ ತಾತಾಸಾಹೇಬ ಬಾಂಗಿ ಅವರನ್ನು ಸಂಘಟಕರು, ಕಸಾಪ ತಾಲೂಕು ಅಧ್ಯಕ್ಷ ಸಂತೋಷ ತಳಕೇರಿ ವೇದಿಕೆಗೆ ಬರುವಂತೆ ಕೇಳಿಕೊಂಡರೂ ಅವರು ಪ್ರೇಕ್ಷಕರ ಸಾಲಿನಲ್ಲೇ ಕುಳಿತುಕೊಂಡರು. ಸಾಹಿತಿ ಮಲ್ಲಿಕಾರ್ಜುನ ಇಂಡಿ ಸಂಪಾದಕತ್ವದಲ್ಲಿನ ಭಾವತೀಥ–'ರ್ಥ ಸ್ಮರಣ ಸಂಚಿಕೆ, ವಿವಿಧ ಸಾಹಿತಿಗಳ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

ಸಮ್ಮೇಳನಾಧ್ಯಕ್ಷ ವೇದಾಂತಾಚಾರ್ಯ ಸಹಜಾನಂದ ಅವಧೂತರು, ಕೃಷ್ಣಾನಂದ ಶ್ರೀಗಳು, ಕಾರ್ಯಾಧ್ಯಕ್ಷ, ವಿ.ಪ. ಮಾಜಿ ಸದಸ್ಯ ಜಿ.ಎಸ್.ನ್ಯಾಮಗೌಡ, ಕೋಶಾಧ್ಯಕ್ಷ ಡಾ. ಉಮೇಶ ಮಹಾಬಳಶೆಟ್ಟಿ, ನಾಡೋಜ ಡಾ. ಎಚ್.ಜಿ. ದಡ್ಡಿ, ತಾಪಂ ಇಒ ಸಂಜೀವ ಜುನ್ನೂರ, ಟಿಎಪಿಸಿಎಂಎಸ್ ಮಾನಿಂಗ ತಳವಾರ, ಕಲಾವಿದರಾದ ಗುರುರಾಜ ಹೊಸಕೋಟಿ, ಹರೀಶ, ಕಾಡು ಮಾಳಿ, ಸುಶೀಲಕುಮಾರ ಬೆಳಗಲಿ, ದಾನೇಶ ಘಾಟಗೆ, ಅಜಯ ಕಡಪಟ್ಟಿ, ಸಿದ್ದು ಮೀಶಿ, ಈಶ್ವರ ವಾಳೆನ್ನವರ, ರಾಜೇಶ್ವರಿ ಹಿರೇಮಠ ಇತರರಿದ್ದರು.

ಶಿಕ್ಷಕಿ ಭಾರತಿ ಮದಿನವರ, ಪಿ.ಎಸ್. ಕಟ್ಟಿಮನಿ ಹಾಗೂ ಬಸಲಿಂಗಯ್ಯ ಮಠಪತಿ ಸಂಗೀತ ಸೇವೆ ನೀಡಿದರು. ಶಿಕ್ಷಕಿಯರಾದ ಎನ್.ಎಲ್. ಮಿರ್ಜಿ, ಸುಮಲತಾ ಕಾಂಬಳೆ, ಉಮಾ ಹಿರೇಮಠ, ವನಜಾ ಇದ್ದಲಗಿ, ಅಂಜನಾ ನವನಿ, ಜಿ.ವಿ.ದಿಕ್ಷಿತ ನಾಡಗೀತೆ ಹಾಗೂ ರೈತಗೀತೆ ಹಾಡಿದರು.

ಕಸಾಪ ಅಧ್ಯಕ್ಷ ಸಂತೋಷ ತಳಕೇರಿ ಸ್ವಾಗತಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಆಶಯ ನುಡಿ ಹೇಳಿದರು. ಎನ್.ಬಿ. ಮಾಲಗಾರ ಹಾಗೂ ಸರಿತಾ ಶಿರಗುಪ್ಪಿ ನಿರೂಪಿಸಿದರು. ಶಿಕ್ಷಕಿ ಚಂದ್ರಕಲಾ ಜನಗೌಡ ವಂದಿಸಿದರು.

ಜನಪ್ರತಿನಿಧಿಗಳ ಅನುಪಸ್ಥಿತಿ: ಸಮ್ಮೇಳನದಲ್ಲಿ ಜನಪ್ರತಿನಿಧಿಗಳು, ಇಲಾಖೆ ಅಧಿಕಾರಿಗಳ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ನಗರ ತುಂಬ ಹಾಕಿದ ಬ್ಯಾನರ್‌ಗಳಲ್ಲಿ ಸಹಸ್ರ ಸಂಖ್ಯೆಯಲ್ಲಿ ಸಾಹಿತ್ಯಾಸಕ್ತರಲ್ಲದ ಭಾವಚಿತ್ರ ಹಾಕಿ ಸಮ್ಮೇಳನ ಮಾಡಲು ಹೊರಟ ಸಂಘಟಕ–ರಿಗೆ ನಿರೀಕ್ಷೆಯಂತೆ ಶಿಕ್ಷಕರು, ಸಾಹಿತ್ಯಾಸಕ್ತರು, ಜನಪ್ರತಿನಿಧಿಗಳು ಪಾಲ್ಗೊಳ್ಳದಿರುವುದು ನಿರಾಸೆ ಮೂಡಿಸಿತು. ಪುಸ್ತಕ, ಖಾದಿ ಬಟ್ಟೆ ಸೇರಿ ವಿವಿಧ ಮಳಿಗೆಗಳಲ್ಲಿ ಸಾಹಿತ್ಯಾಸಕ್ತರು ಪುಸ್ತಕಗಳನ್ನು ಖರೀದಿಸಿದರು.

# ಸಂಭ್ರಮದ ವೆಂಕಟೇಶ್ವರ ರಥೋತ್ಸವ



**ಗುಳೇದಗುಡ್ಡ, ;** ಪಟ್ಟಣದ ಬ್ರಾಹ್ಮಣ ಓಣಿಯಲ್ಲಿನ ವಿಪ್ರ ಸಮಾಜದ ಶ್ರೀ ವೆಂಕಟೇಶ ದೇವರ ರಥೋತ್ಸವ ವಿಜಯದಶಮಿದಿನ ಸಂಭ್ರಮದಿಂದ ನಡೆಯಿತು. ರಥೋತ್ಸವದ ಅಂಗವಾಗಿ ಬೆಳಿಗ್ಗೆ ಶ್ರೀ ವೆಂಕಟೇಶ್ವರ ದೇವರಿಗೆ ಅಭಿಷೇಕ, ಪೂಜೆ ನೆರವೇರಿಸಲಾಯಿತು.

ಬಳಿಕ ಕರಡಿಮಜಲು ಹಾಗೂ ವಿವಿಧ ವಾದ್ಯಗಳ ಮೂಲಕ ದೇವಸ್ಥಾನದಿಂದ ಶ್ರೀ ವೆಂಕಟೇಶ್ವರ ದೇವರ ರಥೋತ್ಸವ ಪ್ರಾರಂಭಗೊಂಡು ಸರಾಫ್ ಬಜಾರ, ಕಂಠಿ ಪೇಟೆ ಮೂಲಕ ಹಾಯ್ದು ದೇವಸ್ಥಾನ ತಲುಪಿತು. ರಥಕ್ಕೆ ಸೇಬು ಹಣ್ಣಿನಿಂದ ಮಾಡಿದ ಮಾಲೆಯಿಂದ ಅಲಂಕರಿಸಲಾಗಿತ್ತು. ದಾರಿಯುದ್ಧಕ್ಕೂ ಭಕ್ತರು ರಥಕ್ಕೆ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿಪ್ರಸಮಾಜದ ಆನಂದ ನರೇಗಲ್, ಸಂಜು ಕಾರಕೂನ, ಪ್ರಸನ್ ಮರಳಿ, ವಾಸುದೇವ ಡಾಣಕಶಿರೂರ, ಚಂದ್ರಧರ ನರೇಗಲ್, ಶ್ರೀನಿಧಿ ಕಾರಕೂನ, ರಾಜು ಜೇರೆ, ವೆಂಟೇಶ ಪರ್ವತೀಕರ, ಅಮೃತ ನರೇಗಲ್, ಅಭಿತ್ ಕಾರಕೂನ, ಭರತ್ ಕುಲಕರ್ಣಿ, ಮದ್ವೇಶ ಕಾರಕೂನ, ಗುಂಡಭಟ್ ಜೋಶಿ, ನವೀನ ನಾನಾವಟೆ, ಸರ್ವೆಶ ಅಂಬೇಕರ ಹಾಗೂ ಸಮಾಜಬಾಂಧವರು ಇದ್ದರು.

# ಉತ್ಸವಗಳ ಉದಾತ್ತ ಆಶಯ ಅರಿಯಿರಿ



**ಬಾಗಲಕೋಟೆ, :** ವಿದ್ಯಾರ್ಥಿಗಳು ನಮ್ಮದೇಶದ ಸಂಸ್ಕೃತಿ–ಪರಂಪರೆಯನ್ನು ತಿಳಿದುಕೊಳ್ಳುವುದರ ಜೊತೆಗೆ ನವರಾತ್ರಿಯಂತಹ ಉತ್ಸವಗಳ ಹಿಂದಿನ ಉದಾತ್ತಆಶಯವನ್ನುಅರಿತುಅದನ್ನುಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.

ಇಲ್ಲಿನ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನವರಾತ್ರಿ ಅಂಗವಾಗಿ ನಡೆದ'ಸರಸ್ವತಿ ಪೂಜಾ'ಕಾರ್ಯಕ್ರಮದಲ್ಲಿಅವರು ಮಾತನಾಡಿದರು.

ನವರಾತ್ರಿಯಲ್ಲಿ ಶಕ್ತಿ ದೇವತೆಯ ವಿವಿಧ ರೂಪಗಳ ಪೂಜೆಯನ್ನು ಮಾಡಲಾಗುತ್ತದೆ. ನಮ್ಮ ಶ್ರೇಷ್ಠ ಸಂಸ್ಕೃತಿ ಹಾಗೂ ಪರಂಪರೆಯ ಪ್ರತೀಕವಾಗಿರುವ ಈ ಉತ್ಸವಗಳು ನಮ್ಮಗತವೈಭವ, ಪರಂಪರೆಯನ್ನು ನೆನೆಪಿಸುತ್ತವೆ.

ಸರಸ್ವತಿ ಕಲೆ,ವಿಜ್ಞಾನ,ಸಂಗೀತದಅಧಿದೇವತೆಯಾಗಿದ್ದು,ಈದೇವಿಯ ಪೂಜೆಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ವಿದ್ಯಾದೇವತೆಯಾಗಿರುವ ಸರಸ್ವತಿಯಅನುಗ್ರಹ ಪಡೆದು ಪ್ರಯತ್ನ ಮತ್ತು ಪರಿಶ್ರಮದಿಂದವಿದ್ಯಾರ್ಥಿಗಳು ಜೀವನದಲ್ಲಿ ಮುಂದೆ ಬರಬೇಕುಎಂದರು.

ಇದೇ ಸಂದರ್ಭದಲ್ಲಿ, ಗ್ರಂಥಾಲಯದಲ್ಲಿನ ಪುಸ್ತಕಗಳಿಗೆ ಪೂಜೆ ನೆರವೇರಿಸಲಾಯಿತು.ಗ್ರಂಥ–'ಪಾಲಕಡಿ.ಎಚ್.ಬಿರಾದಾರಗ್ರಂಥಾಲಯದ ಸದ್ಬಳಕೆ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ತಿಳಿಸಿದರು. ಉಪನ್ಯಾಸಕಕೀರ್ತಿದಾಸರ ಪ್ರಾರ್ಥನಾಗೀತೆ ಹಾಡಿದರು. ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡರು.

# ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ಪ್ರದಾನ



**ಕಲಬುರಗಿ:** ಗದುಗಿನ ತೋಂಟದಾರ್ಯ ಮಠದಲ್ಲಿ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮತ್ತು ತೋಟದ ಸಿದ್ದಲಿಂಗ ಶ್ರೀಗಳ 6ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಿ ಸಚಿವರಾದ ಸನ್ಮಾನ್ಯ ಶ್ರೀ ಹೆಚ್. ಕೆ. ಪಾಟೀಲ್ ಮಾತನಾಡಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಪೂಜ್ಯ ಶ್ರೀ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪುರಸ್ಕೃತರಾದ ಪೂಜ್ಯ ಶ್ರೀ ಡಾ. ನಿರುಪಾಧೀಶ್ವರ ಮಹಾಸ್ವಾಮಿಗಳು ಇವರಿಗೆ ವಿಶೇಷವಾಗಿ ಸನ್ಮಾನಿಸಲಾಯಿತು. ಶರಣ ಸಾಹಿತಿಗಳು, ಜಾನಪದ ವಿದ್ವಾಂಸರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪ ಅವರಿಗೆ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿಯನ್ನು ಕಾನೂನು, ಸಂಸದೀಯ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರಾದ ಸನ್ಮಾನ್ಯ ಶ್ರೀ ಹೆಚ್. ಕೆ. ಪಾಟೀಲ್ ಅವರಿಂದ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಸಮುಖವನ್ನ ಪೂಜ್ಯ ನಿಜಗುಣಪ್ರಭು ತೋಂಟ ದಾರ್ಯ ಮಹಾಸ್ವಾಮಿಗಳು, ಪೂಜ್ಯ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು, ಪೂಜ್ಯ ಕೋರಣೇಶ್ವರ ಮಹಾಸ್ವಾಮಿಗಳು, ಪೂಜ್ಯ ಶ್ರೀ ಪ್ರಭು ಮಹಾಸ್ವಾಮಿಗಳು, ಪೂಜ್ಯ ಶ್ರೀ ಶಾಂತಲಿಂಗ ದೇಶಿಕೇಂದ್ರ ಮಹಾಸ್ವಾಮಿಗಳು,ಗೌರವಾನ್ವಿತ ಅತಿಥಿಗಳಾಗಿ ಶಾಸಕರುಗಳಾದ ಮಾನ್ಯ ಶ್ರೀ ಸಿ. ಸಿ. ಪಾಟೀಲ,ಮಾನ್ಯ ಶ್ರೀ ಜಿ. ಎಸ್. ಪಾಟೀಲ,ಮಾನ್ಯ ಶ್ರೀ ಡಾ. ಚಂದ್ರು ಲಮಾಣಿ,ಮಾನ್ಯ ಶ್ರೀ ಎಸ್. ವಿ. ಸಂಕನೂರ ವಿಧಾನಪರಿಷತ್ ಸದಸ್ಯರು, ಮಾನ್ಯ ಶ್ರೀ ಶಿವಕುಮಾರ ಉದಾಸಿ ಮಾಜಿ ಸಂಸದರು, ಮಾನ್ಯ ಶ್ರೀ ಎಸ್. ಎಸ್. ಪಾಟೀಲ ಮಾಜಿ ಸಚಿವರು, ಮಾಜಿ ಶಾಸಕರುಗಳಾದ ಮಾನ್ಯ ಶ್ರೀ ಡಿ. ಆರ್. ಪಾಟೀಲ,ಮಾನ್ಯ ಶ್ರೀ ಕಳಕಪ್ಪ ಜಿ. ಬಂಡಿ,ಮಾನ್ಯ ಶ್ರೀ ಬಿ. ಆರ್. ಯಾವಗಲ್, ಮಾನ್ಯ ಶ್ರೀ ಜಿ. ಎಸ್. ಗಡ್ಡದೇವರಮಠ,ಮಾನ್ಯ ಶ್ರೀ ರಾಮಕೃಷ್ಣ ದೊಡ್ಡಮನಿ.

ವಿಶೇಷ ಆಮಂತ್ರಿತರಾಗಿ ದಾವಣಗೆರೆ ವಿಶ್ವವಿದ್ಯಾಲಯ ಕುಲಪತಿಗಳಾದ ಮಾನ್ಯ ಶ್ರೀ ಬಿ. ಡಿ. ಕುಂಬಾರ ಕುಲಪತಿಗಳು, ಆಗಮಿಸಿದ್ದರು. ಖ್ಯಾತ ಲೇಖಕರಾದ ಎಸ್ ಎಸ್ ಪಟ್ಟಣ್ ಶೆಟ್ಟರ್ ರಚಿಸಿರುವ ಶ್ರೀ ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳವರ ದುಬೈ ಭೇಟಿಯ ನೆನಪುಗಳು ಮತ್ತು ಹಿರಿಯ ಸಾಹಿತಿಗಳಾದ ಡಾ. ಲಕ್ಷಣ ಕೌಂಠೆ ಅವರು ರಚಿಸಿರುವ ಕೀರ್ತನ ಕೇಸರಿ ಶ್ರೀ ಚನ್ನಬಸವ ಸ್ವಾಮಿಗಳು ಗ್ರಂಥಗಳನ್ನು ಬಿಡುಗಡೆಗೊಳಿಸಲಾಯಿತು. ಪುಣ್ಯಸ್ಮರಣೆಗೆ ಆಗಮಿಸಿದ ಮಠಾಧೀಶರನ್ನು, ಅತಿಥಿಗಳನ್ನು ಭಕ್ತಾದಿಗಳನ್ನು ಸೇರಿ ಎಲ್ಲರನ್ನ ಕಾರ್ಯದರ್ಶಿ ಎಸ್.ಎಸ್. ಪಟ್ಟಣ್ ಶೆಟ್ಟರ್ ಸ್ವಾಗತಿಸಿದರು. ದುಬೈ ಬೇಟಿಯ ಅದ್ಭುತವಾದ ಪ್ರವಚನ ಸುಮಧುರ ಸಂಗೀತ ನಡೆದವು.

## ಕನ್ನಡದ ಜ್ಯೋತಿ ರಥ ಯಾತ್ರೆಗೆ ಕುಕನೂರ ಪಟ್ಟಣದಲ್ಲಿ ಅದ್ದೂರಿ ಸ್ವಾಗತ 87 ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ *ಕನ್ನಡ ಜ್ಯೋತಿ* ಹೊತ್ತ ರಥಯಾತ್ರೆಯು ರಾಜ್ಯಾಂಧ್ಯಾಂತ ಸಂಚರಿಸುತ್ತಿದ್ದು, ಕನ್ನಡ ಜ್ಯೋತಿ ರಥ ಯಾತ್ರೆಯು





● ವಾರ್ತಾಲೋಕ ವಾರ್ತೆ

**ಕುಕನೂರ್ :ಅ18.** ಕುಕನೂರ ತಾಲೂಕಿನ *ರಾಜೂರು ಗ್ರಾಮ ಕುಕನೂರು* ಪಟ್ಟಣ ಪಂಚಾಯತಿ ಹಾಗೂ *ಭಾನಾಪೂರ ಗ್ರಾಮ ಪಂಚಾಯತಿ* ವ್ಯಾಪ್ತಿಯಲ್ಲಿ ಸಂಚರಿಸುತ್ತಿದ್ದು ಕುಕನೂರ ಪಟ್ಟಣದಲ್ಲಿ ಮಾನ್ಯ ತಹಶೀಲ್ದಾರರು ಪ್ರಾಣೇಶ್ ಎಚ್, ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸಂತೋಷ ಬಿರಾದರ್ ಪಾಟೀಲ್ ಸರ್ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು ರವೀಂದ್ರ ಡಿ ಬಾಗಲಕೋಟಿ, ಪಂಟ್ಟಣ ಪಂಚಾಯತಿ ಅಧ್ಯಕ್ಷರಾದ ಲಲಿತಮ್ಮ ಆರ್ ಯಡಿಯಾಪೂರ, ಉಪಾಧ್ಯಕ್ಷರಾದ

ಪ್ರಶಾಂತ ಆರ್ ಬೆರಳಿನ್ ರವರು ರಥಕ್ಕೆ ಪುಷ್ಪಾರ್ಚನೆ ಹಾಗೂ ರಥಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಸ್ವಾಗತ ಮಾಡಿದರು.

ನಂತರ ಕನ್ನಡ ಜ್ಯೋತಿ ರಥಯಾತ್ರೆಯು ವೀರಭದ್ರಪ್ಪ ಸರ್ಕಲ್, ಬಸ್ ಸ್ಟಾಂಡ್, ಅಂಬೇಡ್ಕರ್ ವೃತ್ತದಲ್ಲಿ ಸಾಂಪ್ರದಾಯಕ ಡೊಳ್ಳಿನ ವ್ಯಾದ್ಯದೊಂದಿಗೆ ರಥವು ಸಂಚರಿಸಿತು.

ಕಾರ್ಯ ಕ್ರಮದಲ್ಲಿ ತಾಲೂಕ ಪಂಚಾಯತಿ ಯೋಜನಾಧಿ ಕಾರಿಗಳಾದ ಆನಂದ ಗರೂರ, ಸಿಬ್ಬಂದಿಗಳಾದ ಗಿರಿಧರ್ ಜ್ಯೋಷಿ, ಚೆನ್ನಬಸಪ್ಪ ಸಣ್ಣಕರಡದ್, ಯಲ್ಲಪ್ಪ ನಿಡಶೇಸಿ, ನರೇಗಾ ಸಿನ್ನಂದಿಗಳಾದ ಸುರೇಶ್ ದೇಸಾಯಿ ಗಿರೀಶ್ ಗೂಡೂರ, ಲಕ್ಷ್ಮಣ ಕೆರಳ್ಳಿ, ಶಿವರಾಜ ಬಿ, ಪಟ್ಟಣ ಪಂಚಾಯತಿ ಸಿಬ್ಬಂದಿಗಳಾದ ಮನೋಹರ್, ಮಂಜುನಾಥ, ಶರಣಪ್ಪ ಯತ್ನಳ್ಳಿ, ರಾಜೇಶ್ವರಿ ಎಮ್ ಡಿ ಸೇರಿದಂತೆ ಕನ್ನಡ ಪರ ಸಂಘಟನೆಗಳು, ವಿವಿಧ ಇಲಾಖೆಯ ಅಧಿಕಾರಿಗಳು ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಹಾಜರಿದ್ದರು.

ವರದಿ ಮಂಗಳೇಶ ಎಸ್ ಮಂಗಳೂರು

## ಬೀದಿಬದಿಯಲ್ಲಿ ತಯಾರಿಸಿದ ಆಹಾರ ಪದಾರ್ಥಗಳನ್ನು ಸ್ವಚ್ಛತೆಯಿಂದ ಕಾಪಾಡಿ ಸಾರ್ವಜನಿಕರಿಗೆ ನೀಡಿ ಪಟ್ಟಣ ಪಂಚಾಯತಿ ಅಧ್ಯಕ್ಷ ಕಾವಲಿ ಶಿವಪ್ಪ ನಾಯಕ







● ವಾರ್ತಾಲೋಕ ವಾರ್ತೆ

**ಕೂಡ್ಲಗಿ : ಅ 18** ಕೂಡ್ಲಿಗಿ ಪಟ್ಟಣ ಬೀದಿ ಬೀದಿಗಳಲ್ಲಿ ಬೀದಿಬದಿ ವ್ಯಾಪಾರಿಗಳು ಪ್ರತಿದಿನ ತಿಂಡಿ ತಿನಿಸುಗಳನ್ನ ಮತ್ತು ಅನೇಕ ಆಹಾರ ಪದಾರ್ಥಗಳನ್ನ ಸಂಗ್ರಹಿಸಿ ವ್ಯಾಪಾರ ಮಾಡುತ್ತಿದ್ದು ಸಾರ್ವಜನಿಕರು ತಿಂಡಿ ತಿನಿಸುಗಳನ್ನ ಹಾಗೂ ಎಗ್ ರೈಸ್ ಅನ್ನ ಊಟವಾಗಿ ಉಪಹಾರವಾಗಿ ಉಪಯೋಗಿಸುತ್ತಿದ್ದು ಅದನ್ನು ಬೀದಿ ಬದಿ ವ್ಯಾಪಾರಿಗಳು ಸಾರ್ವಜನಿಕರಿಗೆ ನೀಡುವಾಗ ಸ್ವಚ್ಛತೆಯನ್ನು

ಕಾಪಾಡಬೇಕು ಮತ್ತು ದೂಳು ತಿಂಡಿ ತಿನಿಸುಗಳ ಮೇಲೆ ಸೇರದಂತೆ ರಕ್ಷಣೆಗೆ ಗಾಜು ಮತ್ತು ಇನ್ನಿತರೆ ಸುರಕ್ಷಿತ ಕಾಪಾಡಿ ಸಾರ್ವಜನಿಕರಿಗೆ ನೀಡಬೇಕು ಶುದ್ಧ ಕುಡಿಯುವ ನೀರು ಮತ್ತು ಸುತ್ತಮುತ್ತ ಪರಿಸರವನ್ನ ಸ್ವಚ್ಛತೆಯಿಂದ ಕಾಪಾಡಿಕೊಳ್ಳಬೇಕು ಎಂದು ಹಾಗೂ ಸರ್ಕಾರದಿಂದ ಬೀದಿ ಬದಿ ವ್ಯಾಪಾರಿಗಳಿಗೆ ಸಿಗುವಂತ ಸಾಲದ ಸಹಾಯಧನವನ್ನು ಪಡೆದು ನಿಗದಿತ ಸಮಯದಲ್ಲಿ ಮರುಪಾವಿತಸಬೇಕೆಂದು ಪಟ್ಟಣ ಪಂಚಾಯ್ತಿ ಅಧ್ಯಕ್ಷ ಕಾವಲಿ ಶಿವಪ್ಪ ನಾಯಕ ಕೂಡ್ಲಿಗಿ ಪಟ್ಟಣದ ಬೀದಿಬದಿ ವ್ಯಾಪಾರಿಗಳಿಗೆ ಪಂಚಾಯತಿಯ ಸಿಬ್ಬಂದಿಗಳ ಅಧಿಕಾರಿಗಳ ಜೊತೆ ಕೂಡ್ಲಿಗಿ ಪಟ್ಟಣದಲ್ಲಿ ಜಾಗೃತಿ ಮೂಡಿಸಿದರು

.. ಈ ಸಂದರ್ಭದಲ್ಲಿ FDC. ರಮೇಶ್ , ಗೀತವಿಜೇತ್, ವೆಂಕಟೇಶ್, ಕೊಟ್ರೇಶ್, ನಾಗರಾಜ್, ಶಕುಂತಲ, ಕಾಂಗ್ರೆಸ್ ಮುಖಂಡರ ಆದ ಧಾನಿ ರಾಘವೇಂದ್ರ ಹಾಜರಿದ್ದರು.

ವರದಿ ಹೆಚ್ಚು ವೀರಣ್ಣ.

## ಇನ್‌ಫ್ಲಿಬ್ ನೆಟ್ ಜತೆ ರಾಣಿ ಚನ್ನಮ್ಮ ವಿವಿ ಒಡಂಬಡಿಕೆ

**ಬೆಳಗಾವಿ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೋಮವಾರ ಇನ್‌ಫ್ಲಿಬ್ ನೆಟ್ ಕೇಂದ್ರವನ್ನು ಪ್ರೊ. ದೇವಿಕಾ ಮಡಳ್ಳಿ ಉದ್ಘಾಟಿಸಿದರು.

ವಿಶ್ವವಿದ್ಯಾಲಯವು ತನ್ನ ಶೈಕ್ಷಣಿಕ ಸಂಪತ್ತು ಮತ್ತು ಸಂಶೋಧನಾ ಸಾಮರ್ಥ್ಯವನ್ನು ವಿಸ್ತರಿಸುವಲ್ಲಿ ಮಹತ್ತರ ಹೆಜ್ಜೆಯಿರಿಸಿದೆ. ಅವರು ಕೇಂದ್ರದ ಉದ್ಘಾಟನೆ ಮಾಡಿ, 1991 ರಲ್ಲಿ ಪ್ರಾರಂಭಗೊಂಡ ಇನ್‌ಫ್ಲಿಬ್‌ನೆಟ್‌ನ ಬೆಳೆವಣಿಗೆಯ ಕುರಿತು ವಿವರಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಇನ್‌ಫ್ಲಿಬ್‌ನೆಟ್ ಜೊತೆ ಮಹತ್ವದ ಒಡಂಬಡಿಕೆಯನ್ನು ಮಾಡಿಕೊಂಡಿದೆ. ಇದು ಇನ್‌ಫ್ಲಿಬ್‌ನೆಟ್ನ ಹಲವಾರು ಸೇವೆಗಳನ್ನು ಬಳಸಿಕೊಳ್ಳುವಿಕೆಯಲ್ಲಿ ಮಹತ್ವದ ಒಡಂಬಡಿಕೆಯಾಗಿದೆ. ಉದಾಹರಣೆಗೆ, ಓಪನ್ ಆಕ್ಸಸ್ ಉಪಕ್ರಮಗಳು: ಶೋಧಗಂಗಾ, ಶೋಧಗಂಗೋತ್ರಿ, ಶೋಧಶುದ್ಧಿ, ಶೋಧಚಕ್ರ, ವಿದ್ಯಾಮಿತ್ರವ ಮತ್ತು ಸ್ವಯಂ ಹೀಗೆ ಮುಂತಾದ ವೇದಿಕೆಗಳ ಕುರಿತು ಅವರು ವಿವರಿಸಿದರು. ವಿಶೇಷವಾಗಿ, ಮಹಿಳಾ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳನ್ನು ಸಂಯುಕ್ತ ಸಂಶೋಧನೆಯ ಮೂಲಕ ಸಬಲಗೊಳಿಸುವ ಶೆರ್ನಿ ಎಂಬ ಹೊಸ ನೆಟ್ ವರ್ಕನ್ನು ಪರಿಚಯಿಸಿದರು. .

ಪ್ರಮಾಣೀಕರಣ ಮತ್ತು ಶ್ರೇಯಾಂಕ: ಎನ್‌ಐಆರ್‌ಎಫ್, ಇ-ಎನ್‌ಬಿಎ, ಎನ್‌ಎಎಸಿ ಮತ್ತು ಎಆರ್‌ಐಐಎ ಅಂತಹ ವೇದಿಕೆಗಳು ಹಾಗೂ ವಿಶ್ವವಿದ್ಯಾಲಯ ಮತ್ತು ಮಹಾವಿದ್ಯಾಲಯಗಳಲ್ಲಿ ಅವುಗಳ ಮಹತ್ವವನ್ನು ವಿವರಿಸಲಾಯಿತು. ಇವು ಉತ್ತಮ ಶಿಕ್ಷಣ ಸಂಸ್ಥೆಗಳ ಶ್ರೇಯಾಂಕ ನಿರ್ವಹಣೆಗಾಗಿ ಪ್ರಮುಖ ದಾರಿಯಾಗಿವೆ ಎಂದು ಅವರು ತಿಳಿಸಿದರು.



ಸಂಶೋಧನಾ ಅಭಿವೃದ್ಧಿ: ರಾಷ್ಟ್ರೀಯ ಸಂಶೋಧನಾ ಅಭಿವೃದ್ಧಿ ನೋಂದಣಿ (ಓಖಆಖ) ಯ ಯೋಜನೆ ಮೂಲಕ ಸಂಶೋಧಕರಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಒದಗಿಸಲು ಉದ್ಧೇಶಿಸಲಾಗಿದೆ ಎಂಬುದಾಗಿ ಪ್ರೊ. ದೇವಿಕಾ ಮಡಳ್ಳಿ ಹೇಳಿದರು.

ಹಣಕಾಸು ಅಧಿಕಾರಿ, ಎಂ. ಎ. ಸಪ್ನ ಕಾರ್ಯಕ್ರಮದ ಕುರಿತು ತಮ್ಮ ಅಭಿಪ್ರಾಯಗಳನ್ನು

ಹಂಚಿಕೊಂಡರು, ಈ ಯೋಜನೆಯಿಂದ ವಿಶ್ವವಿದ್ಯಾಲಯದ ಶೈಕ್ಷಣಿಕ ವಲಯಕ್ಕೆ ಹೇಗೆ ಪ್ರಯೋಜನವಾಗಲಿದೆ ಎಂಬುದನ್ನು ವಿವರಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುವ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, ಕುಲಸಚಿವರಾದ ಸಂತೋಷ ಕಾಮಗೌಡ ಕೆ.ಎ.ಎಸ್., ಇವರು ಶೈಕ್ಷಣಿಕ ಸಂಪನ್ಮೂಲಗಳ ಮಹತ್ವವನ್ನು ಉಲ್ಲೇಖಿಸಿದರು. ಈ ಸಂದರ್ಭದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಇನ್‌ಫ್ಲಿಬ್‌ನೆಟ್ ಕೇಂದ್ರ, ಗಾಂಧಿನಗರ, ಗುಜರಾತ್ ನಡುವೆ ಶೈಕ್ಷಣಿಕ ಸಹಕಾರ ಮತ್ತು ಸಂಶೋಧನೆಗೆ ಅನುಕೂಲವಾಗುವ ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಒಪ್ಪಂದ (ಒಔಗ) ಸಹಿ ಮಾಡಲಾಯಿತು.

ಈ ಕಾರ್ಯಕ್ರಮವನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, ಗ್ರಂಥಪಾಲಕರಾದ ಪ್ರೊ. ವಿನಾಯಕ ಬಂಕಾಪುರ ಇವರು ಸಂಂ-ಯೋಜಿಸಿದರು. ಉಪ ಗ್ರಂಥಪಾಲಕರಾದ, ಡಾ. ಸುಮನ ಮುದ್ದಾಪೂರ ಸ್ವಾಗತ ಹಾಗೂ ಅತಿಥಿಗಳ ಪರಿಚಯ ನೀಡಿದರು. ಶಿಕ್ಷಣ ವಿಭಾಗದ ಡೀನ್‌ರಾದ ಪ್ರೊ. ಎಂ. ಸಿ. ಯರ್ರಿಸ್ವಾಮಿ, ಇಂಗ್ಲೀಷ್ ವಿಭಾಗದ ಮುಖ್ಯಸ್ಥೆ ಡಾ. ಕವಿತಾ ಕುಸುಗಲ್ ಮತ್ತು ಪ್ರಸಾರಾಂಗ ನಿರ್ದೇಶಕಿ ಡಾ. ಪೂಜಾ ಹಳ್ಯಾಳ್ ಉಪಸ್ಥಿತರಿದ್ದರು. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ. ಕಿರಣ್ ಪಿ. ಸವಣೂರು ವಂದಿಸಿದರು. ಕಾರ್ಯಕ್ರಮವನ್ನು ಲಕ್ಷ್ಮಿ ಕಾಂಬ್ಳೆ ನಿರ್ವಹಿಸಿದರು.

## ಅಂಗನವಾಡಿಗೆ 5 ಗುಂಟೆ ಭೂದಾನ

**ಕಕಮರಿ:** ಎಲ್ಲರಿಗೂ ದೇವರು ಅಮೂಲ್ಯ ಬದುಕು ನೀಡಿದ್ದಾನೆ. ಅದನ್ನು ಮತ್ತಷ್ಟು ಸುಂದರಗೊಳಿಸಲು ನಿರಂತರ ಪ್ರಯತ್ನ ಹಾಗೂ ಶ್ರಮ ಅಗತ್ಯ ಎಂದು ಅಮ್ಮಾಜೇಶ್ವರಿ ದೇವಸ್ಥಾನ ಸಮಿತಿ ಅಧ್ಯಕ್ಷ ಅಪ್ಪುಗೌಡ ಪಾಟೀಲ ಹೇಳಿದರು.

ಗ್ರಾಮದ ಹೊರವಲಯದ ಮಟ್ಟಿಖೋಡಿ ಅಮ್ಮಾಜೇಶ್ವರಿ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಭೂದಾನಿಗಳ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಶಿವಪ್ಪ ಜನಗೌಡ

ಅವರು ಮಟ್ಟಿಖೋಡಿಯಲ್ಲಿ ಅಂಗನವಾಡಿ ಕೇಂದ್ರ ನಿರ್ಮಾಣಕ್ಕೆ 5 ಗುಂಟೆ ಜಾಗ ದಾನ ನೀಡಿದ್ದಾರೆ. ಪ್ರಸ್ತುತ್ ದಿನಗಳಲ್ಲಿ ಸಾಮಾಜಿ-



ಕ ಕಳಕಳಿ ಹಾಗೂ ಸೇವಾ ಮನೋಭಾವದ ದಾನಿಗಳು ಸಿಗುವುದು ಅಪರೂಪ. ಪ್ರತಿಯೊಬ್ಬರು ತಮ್ಮ ದುಡಿಮೆಯಲ್ಲಿ ಅಲ್ಪವಾದರೂ ದಾನ, ಧರ್ಮ ಮಾಡಿ ಜೀವನ ಸಾರ್ಥಕಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೇಲ್ವಿಚಾರಕಿ ಪ್ರಿಯದರ್ಶಿನಿ ಬಿರಾದಾರ, ತಾಪಂ ಮಾಜಿ ಸದಸ್ಯ ವೆಂಕನಗೌಡ ಪಾಟೀಲ, ಗುರಪ್ಪ ಜನಗೌಡ, ಗ್ರಾಪಂ ಸದಸ್ಯರಾದ ಕಲ್ಲಪ್ಪ ತಂಗಡಿ, ಸಂಗಮೇಶ ಪಠಾಣಿ, ಸಿದ್ದಪ್ಪ ಬಿಳ್ಳೂರ, ರಾಮಣ್ಣ ಆಜೂರ, ಸಿದಗಿರಿ ಅಡಹಳ್ಳಿ, ಭೀಮಪ್ಪ ಜನಗೌಡ ಇತರರಿದ್ದರು.

ಕಕಮರಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ 5 ಗುಂಟೆ ಭೂದಾನ ಮಾಡಿದ ಶಿವಪ್ಪ ಜನಗೌಡ ಅವರನ್ನು ಸನ್ಮಾನಿಸಲಾಯಿತು. ಪ್ರಿಯದರ್ಶಿನಿ ಬಿರಾದಾರ, ವೆಂಕನಗೌಡ ಪಾಟೀಲ, ಗುರಪ್ಪ ಜನಗೌಡ ಇತರರಿದ್ದರು.

# ಮನದಾಳದ ಧ್ವನಿ ಜಾನಪದ

● ವಾರ್ತಾಲೋಕ ವಾರ್ತೆ

**ಕೊಪ್ಪಳ: ಅ18.** ಪ್ರಾಚೀನ ಕಾಲದಲ್ಲಿ ಮಹಿಳೆಯರ ಮನದಾಳದ ಧ್ವನಿಯಿಂದ ಜಾನಪದ ಹುಟ್ಟಿದೆ. ಅಕ್ಷರ ರೂಪವಿಲ್ಲದ ಜಾನಪದ ಸಾಹಿತ್ಯಕ್ಕೆ ಪ್ರಚಲಿತ ದಿನಗಳಲ್ಲಿ ಬಲ ಸಿಕ್ಕು ಮುಖ್ಯ ವಾಹಿನಿಗೆ ಪರಿಚಯವಾಗಿ ಉಳಿಸುವ ಪ್ರಯತ್ನ ನಡೆಯುತ್ತಿದೆ ಎಂದು ಸಾಹಿತಿ ವೀಣಾ ಪಾಟೀಲ ತಿಳಿಸಿದರು.

ಗ್ರಾಮದಲ್ಲಿ ಜಿಲ್ಲಾ ಹಾಗೂ ತಾಲೂಕಾ ಕನ್ನಡ ಸಾಹಿತ್ಯ

ಪರಿಷತ್, ಕಸಾಪ ಅಳವಂಡಿ ಹೋಬಳಿ ಘಟಕ ಹಾಗೂ ಶ್ರೀಬಾಂಧವ್ಯ ಸಂಜೀವಿನಿ ಗ್ರಾಮ ಪಂಚಾಯತ ಮಟ್ಟದ ಮಹಿಳಾ ಒಕ್ಕೂಟದ ವತಿಯಿಂದ ನಡೆದ ಕನ್ನಡ ಸಾಹಿತ್ಯದಲ್ಲಿ ಜಾನಪದ ಹಾಗೂ ಮಹಿಳೆಯರ ಪಾತ್ರ ಕುರಿತು ನಡೆದ ಉಪನ್ಯಾಸ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಚಾಲನೆ ನೀಡಿ ಶುಕ್ರವಾರ ಮಾತನಾಡಿದರು.

ಜಾನಪದ ಕಲೆ ನಮ್ಮ ಜೀವನದ ಒಂದು ಭಾಗವಾಗಿದೆ ಕಲೆ ಬಾಯಿಂದ ಬಾಯಿಗೆ ಪಸರಿಸಿದೆ. ಹೆಚ್ಚಾಗಿ ಅನಕ್ಷರಸ್ಥರು ಇದರಲ್ಲಿ ಸಾಧನೆ ಮಾಡಿದ್ದಾರೆ. ಜನಪದ

ಕಲೆಗಳು ನಮ್ಮ ಆಚಾರ, ವಿಚಾರ, ಸಂಸ್ಕೃತಿಗಳನ್ನು

ಮುಂದಿನ ತಲೆಮಾರಿವನರಿಗೆ ಅಂದರೆ



ತಲೆಮಾರಿನಿಂದ

ತಲೆಮಾರಿನ ವರೆಗೆ ಹೊತ್ತು ಸಾಗುತ್ತವೆ. ಈ ಕಲೆ ದುಡಿದು ದಣಿದ ದೇಹಗಳಿಗೆ ಉಲ್ಲಾಸ, ಉತ್ಸಾಹ

ನೀಡುತ್ತವೆ. ಜೊತೆಗೆ ಆಯಾಸವನ್ನು ಕಡಿಮೆ ಮಾಡಿ ಮನಸ್ಸಗೆ ನೆಮ್ಮದಿ ನೀಡುತ್ತವೆ. ಕಾರಣ ಜನಪದ

ಕಲೆಯನ್ನು ಉಳಿಸಿ ಬೆಳೆಸುವದು ಎಲ್ಲರ ಕರ್ತವ್ಯವಾಗಿದೆ ಎಂದರು.

ಶಿಕ್ಷಕ ನೀಲಪ್ಪ ಹಕ್ಕಂಡಿ ಮಾತನಾಡಿ, ಕನ್ನಡ ಬಾಷೆ ವೈಜ್ಞಾನಿಕ ತಳಹದಿಯ ಮೇಲೆ ರೂಪಿತವಾಗಿದೆ. ಮಾತೃ

ಬಾಷೆ ಬಳಕೆ ಬಗ್ಗೆ ಹಿಂಜರಿಕೆ ಬೇಡ. ಕನ್ನಡ ಬಾಷೆ ಹೃದಯದ ಬಾಷೆಯಾಗಿದೆ. ಕಾರಣ ಕನ್ನಡ ಬಾಷೆಯನ್ನು ಉಳಿಸಿ ಬೆಳೆಸುವ ಕಾರ್ಯ ಆಗಬೇಕು.

ಅರಿವಿನ ಜೋಳಿಗೆಯೊಂದಿಗೆ ನಮ್ಮ ಬದುಕನ್ನು ರೂಪಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಶಂಕ್ರಮ್ಮ ಜೋಗಿನ್,ಶಾರಮ್ಮ ಇಳಿಗೇರ, ರಾಮಚಂದ್ರಗೌಡ ಗೊಂಡಬಾಳ,ಸಾಹಿತಿ ಬಿ.ಎನ್.ಹೊರಪೇಟೆ,

ಜಗದೀಶ್ವರಿ ಜಾಣಗಾರ,ಜಯಶ್ರೀ,ಸುರೇಶ ಸಂಗರಡ್ಡಿ,ಜೂನಾಸಾಬ ವಡ್ಡಟ್ಟಿ ಮತ್ತಿರರು ಉಪಸ್ಥಿತಿ ಇದ್ದರು.

ವರದಿ ಅಬ್ದುಲ್ ವಾಹಿದ್

## ಮಹಾನಗರ ಪಾಲಿಕೆ ಯ ವತಿಯಿಂದ ಪಾದಾಚಾರಿ ಮಾರ್ಗ ತೆರೆವು ಕಾರ್ಯಾಚರಣೆ

● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅ 18.** ನಗರದಲ್ಲಿ ಮಹಾನಗರ ಪಾಲಿಕೆ ಅಧಿಕಾರಿಗಳು ಪಾದಚಾರಿಗಳ ರಸ್ತೆಯಲ್ಲಿ ಫುಟ್ಪಾತ್ ಅಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿರುವ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಆರಂಭಿಸಿದ್ದಾರೆ.

ಫುಟ್ಪಾತ್ ಗಳಲ್ಲಿ ಅಂಗಡಿಗಳ ಸಾಮಾನುಗಳನ್ನು ಇಟ್ಟುಕೊಂಡು ವ್ಯಾಪಾರ ವ್ಯವಹಾರ ಚಟುವಟಿಕೆಯನ್ನು ನಡೆಸುತ್ತಿರುವವರ ವಿರುದ್ಧ ಇಂದು ಮಹಾನಗರ ಪಾಲಿಕೆ ಅಧಿಕಾರಿಗಳು ಜೆಸಿಬಿಯಿಂದ ಪಾದಾಚಾರಿ ಮಾರ್ಗವನ್ನು ಅತೀಕ್ರಮಿಸಿಕೊಂಡಿರುವವರಿಂದ ತೆರವುಗೊಳಿಸಿದರು.

ಈ ಕಾರ್ಯಚರಣೆಯನ್ನು ವಾರದಲ್ಲಿ ಒಂದು ದಿನ ಅಂದರೆ ಪ್ರತಿ ಬುಧವಾರ ಮಾಡಬೇಕೆಂದು ಪಾಲಿಕೆ ಅಧಿಕಾರಿಗಳು



ನಿರ್ಣಯಿಸಿದ್ದಾರೆ . ಆದರೆ ವಾರಕ್ಕೆ ಎರಡು ಬಾರಿ ಕಾರ್ಯಾಚರಣೆ ಮಾಡಿ ಪಾದಾಚಾರಿ ಮಾರ್ಗವನ್ನುಅತಿಕ್ರಮಿಸಿಕೊಂಡಿರುವವರಿಂದ ತೆರವುಗೊಳಿಸಬೇಕೆಂದು ಸಮಾಜ ಸೇವಕರು ಮತ್ತು ಸಾರ್ವಜನಿಕರು ಪಾಲಿಕೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಅಷ್ಟೇ ಅಲ್ಲದೆ ನಗರದಲ್ಲಿ ವಿಪರೀತ ವಾಹನಗಳಿಂದ ಆಗಾಗ್ಗೆ ಟ್ರಾಫಿಕ್ ಜಾಮ್ ಉಂಟಾಗುತ್ತಿದ್ದು ಪೊಲೀಸ್ ಅಧಿಕಾರಿಗಳು ಟ್ರಾಫಿಕ್ ಕಂಟ್ರೋಲ್ ಮಾಡಿ ಟ್ರಾಫಿಕ್ ಸಮಸ್ಯೆಯಿಂದ ಸಾರ್ವಜನಿಕರನ್ನು ಮುಕ್ತಿಗೊಳಿಸಬೇಕೆಂದು ಅಧಿಕಾರಿಗಳನ್ನು ಮನವಿ ಮಾಡಿದ್ದಾರೆ.

ಇಂತಹ ಸಾರ್ವಜನಿಕ ಸಮಸ್ಯೆಗಳನ್ನು ಅರಿತು ಕೆಲಸ ಮಾಡುತ್ತಿರುವ ಮೇಯರ್ ಮತ್ತು ಮಹಾನಗರ ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸಾರ್ವಜನಿಕರು ಧನ್ಯವಾದಗಳು ತಿಳಿದಿದ್ದಾರೆ.

## ಕಳಸಾ-ಬಂಡೂರಿ ಅನುಷ್ಠಾನಕ್ಕೆ ಕೇಂದ್ರ ನಿರ್ಲಕ್ಷ್ಯ

**ನರಗುಂದ:** ಮಹದಾಯಿ, ಕಳಸಾ-ಬಂಡೂರಿ ಯೋಜನೆ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ. ಈಗಾಗಲೇ ರಾಜ್ಯದಿಂದ ಅನೇಕ ಬಾರಿ ಕೇಂದ್ರಕ್ಕೆ ಮನವಿ ಮಾಡಲಾಗಿದೆ. ಆದರೂ ಕೇಂದ್ರ ಸರ್ಕಾರ ಸರಿಯಾಗಿ ಉತ್ತರ ನೀಡುತ್ತಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಆರೋಪಿಸಿದರು.

ಕಳಸಾ-ಬಂಡೂರಿ ಯೋಜನೆ ಅನುಷ್ಠಾನ, ಹುತಾತ್ಮ ರೈತನ ಸ್ಮಾರಕ ಭವನ

ನಿರ್ವಣಕ್ಕೆ ಆಗ್ರಹಿಸಿ ನರಗುಂದದಲ್ಲಿ ರೈತರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ರೈತರಿಂದ ಮನವಿ ಸ್ವೀಕರಿಸಿ ಅವರು ಮಾತನಾಡಿದರು.



ಕೇಂದ್ರ ಸರ್ಕಾರ ಉತ್ತರ ಕರ್ನಾಟಕದ ಮಹದಾಯಿ, ಕಳಸಾ- ಬಂಡೂರಿ ಯೋಜನೆ ಅನುಷ್ಠಾನ ಇನ್ನೂ ನಿರ್ಲಕ್ಷ್ಯ ಮಾಡಿದಲ್ಲಿ ಈ ಭಾಗದ ರೈತರು ಎಂದಿಗೂ ಸರ್ಕಾರವನ್ನು ಕ್ಷಮಿಸುವುದಿಲ್ಲ. ಯೋಜನೆ ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ ಪತ್ರ ಬರೆಯಲಾಗಿದೆ. ಆದರೆ, ಕೇಂದ್ರ ಯಾಕೆ ಹಿಂದೇಟು ಹಾಕುತ್ತಿದೆ ಎಂಬುದು ತಿಳಿಯುತ್ತಿಲ್ಲ ಕಳವಳ ವ್ಯಕ್ತಪಡಿಸಿದರು.

ಹುತಾತ್ಮ ರೈತನ ವೀರಗಲ್ಲು ಹಾಗೂ ಸ್ಮಾರಕ ಭವನ ನಿರ್ವಣಕ್ಕೆ ರೈತರು ನೀಡಿದ ಸ್ವೀಕರಿಸಿ, ಸರ್ಕಾರದಿಂದ ರೈತ ಪುತ್ಥಳಿ ಅನಾವರಣ, ಸ್ಮಾರಕ ಭವನ ನಿರ್ವಣಕ್ಕೆ ವಿಶೇಷ ಶ್ರಮ ವಹಿಸಲಾಗುವುದು. ಡಿಸೆಂಬರ್ ಅಂತ್ಯದೊಳಗಾಗಿ ಇದನ್ನು ಕಾರ್ಯರೂಪಕ್ಕೆ ತರಲಾಗುವುದು ಎಂದು ಸಚಿವ ಎಚ್.ಕೆ. ಪಾಟೀಲ ಸತ್ಯಾಗ್ರಹ ನಿರತ ರೈತರಿಗೆ ಭರವಸೆ ನೀಡಿದರು. ಸಚಿವರ ಭರವಸೆಗೆ ಸಮ್ಮತಿ ವ್ಯಕ್ತಪಡಿಸಿದ ಸತ್ಯಾಗ್ರಹ ನಿರತ ರೈತರು ಅ. 13ರಿಂದ ಆಮರಣ ಉಪವಾಸ ಸತ್ಯಾಗ್ರಹ ಕೈ ಬಿಟ್ಟು ನಿತ್ಯ ಸರದಿ ಉಪವಾಸ ಕೈಗೊಳ್ಳುವ ನಿರ್ಣಯ ಕೈಗೊಂಡರು.

ಶಂಕರಪ್ಪ ಅಂಬಲಿ, ರೈತ ಸಂಘದ ತಾಲೂಕ ಅಧ್ಯಕ್ಷ ವಿಠ್ಠಲ ಜಾಧವ, ಬಸವರಾಜ ಸಾಬಳೆ, ಚನ್ನು ನಂದಿ, ನಬಿಸಾಬ್ ಕಿಲ್ಲೇದಾರ, ಬಸವರಾಜ ತಾವರೆ, ರವಿ ಒಡೆಯರ್, ಈರಣ್ಣ ಸೊಪ್ಪಿನ, ಶಂಕರಗೌಡ ಪಾಟೀಲ, ಮನೋಹರ ಹುಯಿಲಗೋಳ, ಕಲ್ಲಯ್ಯ ಮಠಪತಿ, ಈರಮ್ಮ ಮೇಟಿ, ಮೇರಿ ಸುದರ್ಶನ, ಸಿಪಿಐ ಮಂಜುನಾಥ ನಡುವಿನಮನಿ, ಇತರರು ಇದ್ದರು.

## ಬಳ್ಳಾರಿ ಸಂಸದ ತುಕಾರಾಂ ಸಹೋದರಿ ಪುಷ್ಪವತಿ ಅವರ ಮನೆಗೆ ಜನಾರ್ದನ ರೆಡ್ಡಿ ಭೇಟಿ

● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅ 18.** ಸಂಡೂರಿನ ಮಾಜಿ ಶಾಸಕರು ಹಾಗೂ ಹಾಲಿ ಸಂಸದರಾದ ಈ ತುಕಾರಾಂ ಅವರ ಸಹೋದರಿ ಪುಷ್ಪವತಿ ನಾಗರಾಜ್ ಅವರ ಮನೆಗೆ ಇಂದು ಗಂಗಾವತಿ ಶಾಸಕ ಮತ್ತು ಸಂಡೂರು ಕ್ಷೇತ್ರದ ಉಪಚುನಾವಣೆ ಉಸ್ತುವಾರಿಯಾದ ಗಾಲಿ ಜನಾರ್ದನ ರೆಡ್ಡಿ ಭೇಟಿ ನೀಡಿ ಉಭಯ ಕುಶಲೋಪರಿ ವಿಚಾರಿಸಿದರು.

ಗಾಲಿ ಜನಾರ್ದನ ರೆಡ್ಡಿ ಅವರು ಇಂದು ಸಂಡೂರು ಪಟ್ಟಣದಲ್ಲಿ ವಿಧಾನಸಭೆ ಉಪಚುನಾವಣೆ ಪ್ರಯುಕ್ತ ಗೃಹ ಕಚೇರಿಯ ಗೃಹಪ್ರವೇಶ ಕಾರ್ಯಕ್ರಮ ಪೂಜೆಗಳನ್ನು ನೆರವೇರಿಸಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿ,

ಮಾಜಿ ಸಚಿವ ಗ್ರಾಮಾಂತರ ಶಾಸಕ ಬಿ ನಾಗೇಂದ್ರ ನಿನ್ನೆ ವಾಲ್ಮೀಕಿ ಜಯಂತಿಯ ವೇದಿಕೆಯಲ್ಲಿ ದುಃಖವನ್ನು ವ್ಯಕ್ತಪಡಿಸಿರುವುದು ಪಾಪ ಪ್ರಜ್ಞೆಯಿಂದ ಹೊರತು ಬೇರೆ ಏನು ಇಲ್ಲ ತಪ್ಪು ಮಾಡಿದ್ದಾರೆ ಅವನಿಗೆ ಪಾಪ ಪ್ರಜ್ಞೆ ಕಾಡುತ್ತಿದೆ ಎಂದು ಲೇವಡಿ ಮಾಡಿದರು, ನಾಗೇಂದ್ರ ಈಗಾಗಲೇ ಅವನು ಡಸ್ಟ್ ಬಿನ್ನಿಗೆ ಬಿದ್ದ ವ್ಯಕ್ತಿ ಅವನ ವಿಷಯ ಎಲ್ಲಾ ನನಗೆ ಗೊತ್ತು,



ಅವನು ನನಗೆ ಲೆಕ್ಕಕ್ಕೆ ಇಲ್ಲ ಅವನನ್ನು ನಾನೇ ರಾಜಕೀಯವಾಗಿ ಬೆಳೆಸಿದ್ದು ಎಂದು ವ್ಯಂಗ್ಯವಾಡಿದರು.

ಬಿಜೆಪಿಯಲ್ಲಿ ಯಾವುದೇ ಬಣಗಳಿಲ್ಲ ಇದ್ದರೂ ನಮಗೆ ಅದ್ಯಾವುದು ಲೆಕ್ಕಕ್ಕಿಲ್ಲ ಪಕ್ಷದ ಚಿಹ್ನೆ ಕಮಲ ಗುರುತು ಮಾತ್ರ ನಮ್ಮ ಅಭ್ಯರ್ಥಿ ಅದಕ್ಕೆ ನಾವು ಮತಗಳನ್ನು ಹಾಕಿಸಿ ವಿಧಾನಸಭೆ ಉಪಚುನಾವಣೆಯನ್ನು ಗೆಲ್ಲುತ್ತೇವೆ ಎಂದು ತಿಳಿಸಿದರು.

ನಾನು ರಾಜ್ಯದಲ್ಲಿ ಯಾವುದೇ ಗಣಿಗಾರಿಕೆಯನ್ನು ನಡೆಸುತ್ತಿಲ್ಲ ಹೀಗಿದ್ದಾಗ ಅಕ್ರಮ ಗಣಿಗಾರಿಕೆ ನಡೆಸಿದ್ದೇನೆ ಎಂಬುದು ಶುದ್ಧ ಸುಳ್ಳು ನನಗೆ ಆಂಧ್ರಪ್ರದೇಶದ ಓಎಂಸಿ ಮಾತ್ರ ಗಣಿಗಾರಿಕೆ ಇದೆ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಳ್ಳಾರಿ ನಗರ ಮಾಜಿ ಶಾಸಕರಾದ ಗಾಲಿ

ಸೋಮಶೇಖರ ರೆಡ್ಡಿ, ಕೆ ಎಸ್ ದಿವಾಕರ್, ನಾನಾ ಸಾಹೇಬ್, ಬಂಗಾರು ಹನುಮಂತು, ಪಂಪಾಪತಿ, ಸೋಮನಗೌಡ, ಯರಿಸ್ವಾಮಿ, ಶರಣು, ಸೇರಿದಂತೆ ಹಲವಾರು ಜನ ಉಪಸ್ಥಿತರಿದ್ದರು.

VARTHALOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com